ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-4 Issue 1, July-August 2022, Pp. 12-26.
©*IIMRD*, Mysuru

IIMRD JOURNALS
www.iimrd.com

# ದೃಷ್ಟಿ ಸವಾಲುಳ್ಳ ವಿದ್ಯಾರ್ಥಿನಿಯರ ಸಮಸ್ಯೆಗಳು: ಪ್ರಕರಣ ಅಧ್ಯಯನ

**ಸೌಮ್ಯಶ್ರೀ.ಎಸ್.ಕೆ* ಮತ್ತು ಡಾ. ಎಂ.ಮೀರಾ****

*ಸಂಶೋಧನಾ ವಿದ್ಯಾರ್ಥಿನಿ, ಮಹಿಳಾ ಅಧ್ಯಯನ ಕೇಂದ್ರ, ಮಾನಸಗಂಗೋತ್ರಿ, ಮೈಸೂರು.

** ಸಹ ಪ್ರಾಧ್ಯಾಪಕರು, ಅಭಿವೃದ್ಧಿ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು.

**ಸಾರಾಂಶ: (Abstract)**

*ಆರೋಗ್ಯ ಎಂಬ ವಿಷಯವು ಮಾನಸಿಕ ಮತ್ತು ದೈಹಿಕ ಸುಸ್ಥಿತಿ ಮತ್ತು ಸದೃಢತೆಯನ್ನು ತಿಳಿಸುತ್ತದೆ. ದೇಹ ಅಥವಾ ಮನಸ್ಸು ಯಾವುದಕ್ಕೆ ತೊಂದರೆಗಳಿದ್ದರು ಅದು ಅನಾರೋಗ್ಯವೇ. ದೃಷ್ಟಿ ಸವಾಲುಳ್ಳವರು ದೈಹಿಕವಾಗಿ ದೃಷ್ಟಿ ಸಮಸ್ಯೆಗಳನ್ನು ಎದುರಿಸುವ ಜೊತೆಗೆ ಅದರ ಕಾರಣದಿಂದಾಗಿ ಮಾನಸಿಕ ಸಮಸ್ಯೆಗಳನ್ನು ಅನುಭವಿಸುತ್ತಾರೆ. ಕುಟುಂಬವೂ ಸೇರಿದಂತೆ ಸಮಾಜ ಇವರನ್ನು ನೋಡುವ ರೀತಿಯೇ ಭಿನ್ನ, ತಿರಸ್ಕಾರ ಹಾಗೂ ಅಮಾನವೀಯ ನೆಲೆಯಿಂದಾಗಿರುತ್ತದೆ. ಹೆಚ್ಚಿನ ದೃಷ್ಟಿಸವಾಲುಳ್ಳ ಮಕ್ಕಳು ಆತ್ಮವಿಶ್ವಾಸ ಇಲ್ಲದಿರುವವರಾಗಿ, ಧೈರ್ಯವಿಲ್ಲದವರಾಗಿ, ಏನನ್ನು ಸಾಧಿಸಲಾಗದವರಾಗಿ, ಪರಾವಲಂಬಿಗಳಾಗಿ ಬದುಕುತ್ತಿರುತ್ತಾರೆ. ಹಲವು ದೃಷ್ಟಿಸವಾಲುಳ್ಳ ಮಕ್ಕಳು ಪೋಷಕರ ಅಜ್ಞಾನ, ಬಡತನ, ದೃಷ್ಟಿಸವಾಲುಳ್ಳವರ ಬಗ್ಗೆ ಸಮಾಜದ ಧೋರಣೆ, ಸರ್ಕಾರದ ಸೌಲಭ್ಯಗಳ ಬಗ್ಗೆ ತಿಳಿಯದೆ ಇರುವ ಕಾರಣ ಶಾಲೆಗಳಿಂದ ವಂಚಿತರಾಗಿದ್ದಾರೆ. ದೃಷ್ಟಿಸವಾಲುಳ್ಳ ಹೆಣ್ಣು ಮಕ್ಕಳು, ಬಡತನ, ಲಿಂಗತಾರತಮ್ಯ, ಪೋಷಕರು ಮತ್ತು ಸಮಾಜದ ನಿರ್ಲಕ್ಷ್ಯ, ಆರೋಗ್ಯದ ಸಮಸ್ಯೆಗಳು, ಪ್ರೀತಿ ಮತ್ತು ಕಾಳಜಿಯ ಕೊರತೆ, ಅಭದ್ರತಾ ಭಾವ ಮತ್ತು ಲೈಂಗಿಕ ಸಮಸ್ಯೆಗಳನ್ನು ಅನುಭವಿಸುತ್ತಿದ್ದಾರೆ. ಪ್ರಸ್ತುತ ಅಧ್ಯಯನದಲ್ಲಿ ದೃಷ್ಟಿಸವಾಲುಳ್ಳ ಶಾಲಾ ವಿದ್ಯಾರ್ಥಿಗಳ ಸ್ಥಿತಿಗತಿಗಳು ಮತ್ತು ಅವರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ತಿಳಿಯುವ ಪ್ರಯತ್ನವನ್ನು ಪ್ರಕರಣ ಅಧ್ಯಯನಗಳ ಮೂಲಕ ಮಾಡಲಾಗಿದೆ.*

**ಮುಖ್ಯಪದಗಳು (Keywords):** ದೃಷ್ಟಿ ದೋಷ, ಪ್ರಕರಣ ಅಧ್ಯಯನ, ದೌರ್ಜನ್ಯ, ವಿದ್ಯಾರ್ಥಿನಿ.

## ಪೀಠಿಕೆ

ದೃಷ್ಟಿಸವಾಲುಳ್ಳ ಹೆಣ್ಣು ಮಕ್ಕಳು ಪಿತೃ ಪ್ರಧಾನ ಸಮಾಜಲ್ಲಿ ಎರಡು ರೀತಿಯ ಶೋಷಣೆಯನ್ನು ಅನುಭವಿಸುತ್ತಾರೆ. ಒಂದು ಆಕೆ ಹೆಣ್ಣು ಎನ್ನುವ ಕಾರಣಕ್ಕೆ ಅಸಮಾನತೆ, ತಾರತಮ್ಯ, ಶೋಷಣೆಗಳನ್ನು ಅನುಭವಿಸಿದರೆ, ಮತ್ತೊಂದು ರೀತಿಯಲ್ಲಿ ದೃಷ್ಟಿ ಸವಾಲುಳ್ಳವಳು ಎನ್ನುವ ಕಾರಣಕ್ಕೆ ಅಸಮಾನತೆ, ಶೋಷಣೆ ಮತ್ತು ತಾರತಮ್ಯಗಳಿಗೆ ಒಳಗಾಗುತ್ತಾಳೆ. ದೃಷ್ಟಿ ಸವಾಲುಳ್ಳ ವಿದ್ಯಾರ್ಥಿಗಳು ಸಮಾಜದಲ್ಲಿ ಹಲವು

*Please cite this article as: ಸೌಮ್ಯಶ್ರೀ ಎಸ್. ಕೆ ಮತ್ತು ಎಂ. ಮೀರಾ* (2022). ದೃಷ್ಟಿ ಸವಾಲುಳ್ಳ ವಿದ್ಯಾರ್ಥಿನಿಯರ ಸಮಸ್ಯೆಗಳು: ಪ್ರಕರಣ ಅಧ್ಯಯನ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 4(1). ಪು.ಸಂ.* 12–26

ವಿಧದ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಸಮಾಜದಲ್ಲಿ ದೃಷ್ಟಿ ಸವಾಲುಳ್ಳ ವ್ಯಕ್ತಿಗಳನ್ನು ಭಿನ್ನವಾಗಿ ನೋಡಲಾಗುತ್ತದೆ. ಅವರಿಗೆ ಸಮಾಜದಿಂದ ಅಷ್ಟೇ ಅಲ್ಲದೆ ಕುಟುಂಬದಿಂದಲೂ ತಿರಸ್ಕಾರ ವ್ಯಕ್ತವಾಗುತ್ತದೆ. ದೃಷ್ಟಿ ಸವಾಲುಳ್ಳ ವ್ಯಕ್ತಿಗಳು ಕೆಲವೊಮ್ಮೆ ಆತ್ಮವಿಶ್ವಾಸವನ್ನೆ ಕಳೆದುಕೊಂಡು ತಮಗೆ ಏನು ಮಾಡಲು ಸಾಧ್ಯವಿಲ್ಲ ಎಂಬ ಕೀಳರಿಮೆಯನ್ನು ಹೊಂದುವಂತೆ ಸಮಾಜ ಅವರನ್ನು ಮಾಡುತ್ತದೆ. ಆರೋಗ್ಯದ ವಿಷಯಗಳಲ್ಲೂ ಸಮಸ್ಯೆಗಳನ್ನು ಎದುರಿಸುವ ಇವರು ಸ್ವಾವಲಂಭಿಗಳಾಗಿ ಬದುಕಲು ಸಾಧ್ಯವಾಗದೆ ಎಲ್ಲದಕ್ಕೂ ಬೇರೆಯವರ ಮೇಲೆ ಅವಲಂಭಿತವಾಗಬೇಕಾಗುತ್ತದೆ. ಅದರಲ್ಲೂ ಹೆಣ್ಣು ಮಕ್ಕಳ ವಿಷಯದಲ್ಲಂತೂ ಇನ್ನೂ ಹೆಚ್ಚಿನ ಸಮಸ್ಯೆಗಳನ್ನು ಅನುಭವಿಸುವುದು ಕಂಡು ಬರುತ್ತದೆ.

ಲೈಂಗಿಕತೆಯ ವಿಷಯದಲ್ಲಿ ಹೆಚ್ಚು ಶೋಷಣೆಗೆ ಒಳಗಾಗಿರುವವರು ಹೆಣ್ಣು ಮಕ್ಕಳು ಮತ್ತು ಮಹಿಳೆಯರೇ ಆಗಿರುತ್ತಾರೆ. ಹೆಣ್ಣು ಎಂದರೆ ಭೋಗದ ವಸ್ತು ಎಂಬಂತೆ ಆಕೆಯನ್ನು ನೋಡುವುದು ಪಿತೃಪ್ರಧಾನ ಸಮಾಜದ ರೂಢಿಯಾಗಿಬಿಟ್ಟಿದೆ. ಆಕೆ ಗಂಡಿನ ಆಸೆಯನ್ನು ಪೂರ್ತಿಗೊಳಿಸಲು ಇರುವವಳು, ವಂಶವನ್ನು ಉದ್ದಾರ ಮಾಡಲು ಮಕ್ಕಳನ್ನು ಹೆತ್ತುಕೊಡುವ ಯಂತ್ರ ಎಂಬಂತೆ ನಡೆಸಿಕೊಳ್ಳುವುದನ್ನು ನಮ್ಮ ಸಮಾಜದಲ್ಲಿ ನೋಡ ಬಹುದಾಗಿದೆ. ಪುರುಷನ ಕಾಮಕ್ಕೆ ಕೆಲವೊಮ್ಮೆ ಸಂಬಂಧಗಳು ಕೂಡ ಮರೆತು ಹೋಗುತ್ತವೆ, ಚಿಕ್ಕ ಮಕ್ಕಳು, ಸ್ವಂತ ಮಗಳು, ಸಹೋದರಿ ಎನ್ನುವುದನ್ನು ಮರೆತು ಅಂಧರಾಗಿ ಮೃಗಗಳಂತೆ ನಡೆದುಕೊಳ್ಳುವ ಸಾಕಷ್ಟು ಉದಾಹರಣೆಗಳನ್ನು ನಮ್ಮ ನಿತ್ಯ ಜೀವನದಲ್ಲಿ ನೋಡಬಹುದಾಗಿದೆ. ದೃಷ್ಟಿಸವಾಲುಳ್ಳ ವಿದ್ಯಾರ್ಥಿಗಳು ಸಮಾಜದಲ್ಲಿ ಹಲವು ವಿಧದ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಪ್ರಸ್ತುತ ಲೇಖನದಲ್ಲಿ ಮೈಸೂರು ತಾಲ್ಲೂಕಿನಲ್ಲಿ ದೃಷ್ಟಿಸವಾಲುಳ್ಳ ವಿದ್ಯಾರ್ಥಿಗಳಿಗಾಗಿ ಇರುವ ವಿಶೇಷ ಶಾಲೆಯಾದ ರಂಗರಾವ್ ಸ್ಮಾರಕ ವಿಕಲಚೇತನರ (ಅಂಧ ಹೆಣ್ಣು ಮಕ್ಕಳ) ವಸತಿ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಪ್ರಕರಣ ಅಧ್ಯಯನವನ್ನು ಮಾಡಲಾಗಿದೆ.

ಈ ಶಾಲೆಯಲ್ಲಿ 6ನೇ ತರಗತಿಯಿಂದ 10ನೇ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ ದೃಷ್ಟಿ ಸವಾಲುಳ್ಳ ವಿದ್ಯಾರ್ಥಿಗಳನ್ನು ಪ್ರಕರಣ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಅದರಲ್ಲಿ ಕೆಲವು ಪ್ರಕರಣ ಅಧ್ಯಯನಗಳನ್ನು ಇಲ್ಲಿ ಪ್ರಸ್ತುತ ಪಡಿಸಲಾಗಿದೆ.

**ಅಧ್ಯಯನದ ಉದ್ದೇಶಗಳು:**

- ದೃಷ್ಟಿ ದೋಷದ ಬಗ್ಗೆ ತಿಳಿಯುವುದು.
- ದೃಷ್ಟಿಸವಾಲುಳ್ಳ ಶಾಲಾ ವಿದ್ಯಾರ್ಥಿನಿಯರು ಎದುರಿಸುತ್ತಿರುವ ಸಮಸ್ಯೆಗಳನ್ನು ಅರಿಯುವುದು.

**ಸಂಶೋಧನಾ ವಿಧಾನ**

ಪ್ರಸ್ತುತ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಶಾಲೆಯಲ್ಲಿನ ಪ್ರತಿ ತರಗತಿಯಿಂದ ಒಬ್ಬ ವಿದ್ಯಾರ್ಥಿಯಂತೆ ಒಟ್ಟು 5 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿಕೊಂಡು ಪ್ರಾಥಮಿಕ ಮಾಹಿತಿ ಸಂಗ್ರಹಿಸಿಲಾಗಿದೆ. ಇದರೊಂದಿಗೆ ವಿವಿಧ ಗ್ರಂಥಗಳು, ಲೇಖನಗಳು ಹಾಗೂ ಸಂಶೋಧನಾ ವರದಿಗಳಿಂದ ಮಾಧ್ಯಮಿಕ ಮಾಹಿತಿಗಳನ್ನು ಕಲೆಹಾಕಲಾಗಿದೆ. ಪ್ರಸ್ತುತ ಅಧ್ಯಯನಕ್ಕೆ ಸಂದರ್ಶನ, ಅವಲೋಕನ, ಗುಂಪು ಚರ್ಚೆ, ಪ್ರಕರಣ ಅಧ್ಯಯನ ವಿಧಾನಗಳನ್ನು ಬಳಸಿಕೊಳ್ಳಲಾಗಿದೆ.

**ವಿಷಯ ಮಂಡನೆ:**

ಮಾನವ ಸಂಪನ್ಮೂಲ ಅಭಿವೃಧಿ ಇಲಾಖೆಯವರು 21 ವಿಧದ ವಿಕಲತೆಗಳನ್ನು ಗುರುತಿಸಿದೆ. ಅದು ಗುರುತಿಸಿರುವ ವಿಕಲತೆಯ ವಿಧಗಳಲ್ಲಿ ದೃಷ್ಟಿದೋಷದ ಎರಡು ವಿಧಗಳು ಸಹ ಸೇರಿವೆ. ಪ್ರಕರಣ ಅಧ್ಯಯನ ವಿಧಾನವು ಸಂಶೋಧನೆಯಲ್ಲಿ ಸಂಶೋಧನೆಗೆ ಒಳಪಟ್ಟ ವ್ಯಕ್ತಿಯ ಬಗ್ಗೆ ಪೂರ್ಣ ಮಾಹಿತಿ ತಿಳಿಯಲು ಅತ್ಯುತ್ತಮವಾದ ವಿಧಾನವಾಗಿದೆ. ಸಂಶೋಧನೆಯಲ್ಲಿ ಕೈಗೊಂಡ ಕೆಲವು ಪ್ರಕರಣ ಅಧ್ಯಯನಗಳು ಈ ಕೆಳಗಿನಂತಿವೆ. ಈ ಕೆಳಗಿನ ಪ್ರಕರಣ ಅಧ್ಯಯನಗಳಲ್ಲಿ ಆಯ್ಕೆ ಮಾಡಲಾಗಿರುವ ವಿದ್ಯಾರ್ಥಿಗಳ ಗೌಪ್ಯತೆ ಕಾಪಾಡುವ ಸಲುವಾಗಿ ಮತ್ತು ನೈತಿಕತೆಯ ದೃಷ್ಟಿಯಿದಾಗಿ ಅವರ ನಿಜವಾದ ಹೆಸರನ್ನು ಬದಲಾಯಿಸಿ ಕಾಲ್ಪನಿಕ ಹೆಸರನ್ನು ಬರೆಯಲಾಗಿದೆ.

**ಪ್ರಕರಣ: 1**

ಅದಿತಿ (ಹೆಸರನ್ನು ಬದಲಾಯಿಸಲಾಗಿದೆ) ಇವರು 15 ವರ್ಷ ವಯಸ್ಸಿನವರಾಗಿದ್ದು, ರಂಗರಾವ್ ಸ್ಮಾರಕ ವಿಕಲಚೇತನರ ಶಾಲೆ, ಮೇಟಗಳ್ಳಿ, ಮೈಸೂರಿನಲ್ಲಿ 6ನೇತರಗತಿಯಲ್ಲಿ ವಿದ್ಯಾಭಾಸ ಮಾಡುತ್ತಿದ್ದು, ಇವರು ಪರಿಶಿಷ್ಟ ಜಾತಿಗೆ ಸೇರಿದವರಾಗಿದ್ದಾರೆ. ಗ್ರಾಮೀಣ ಪ್ರದೇಶಕ್ಕೆ ಸೇರಿದವರಾದ ಅದಿತಿಯವರು ಪ್ರಸ್ತುತ ರಂಗರಾವ್ ವಸತಿ ಶಾಲೆಯಲ್ಲಿ ಓದುತ್ತಾ ಹಾಸ್ಟೆಲ್‌ನಲ್ಲೇ ಉಳಿದುಕೊಂಡಿದ್ದಾರೆ. ಇವರ ತಂದೆ ಗಾರೆಕೆಲಸವನ್ನು ಮಾಡುತ್ತಿದ್ದು, ತಾಯಿ ಕೂಲಿ ಕೆಲಸಕ್ಕೆ ಹೋಗುತ್ತಾರೆ, ಅದಿತಿಯವರ ಸೋದರ ಊರಿನಲ್ಲಿ 7ನೇ ತರಗತಿಯಲ್ಲಿ ಓದುತ್ತಿದ್ದಾರೆ. ಅದಿತಿ ಅವರಿಗೆ ಕಣ್ಣಿನ ಸಮಸ್ಯೆ ಹುಟ್ಟಿನಿಂದಲೇ ಇದ್ದು ಆಸ್ಪತ್ರೆಗೆ ತೋರಿಸಿದಾಗ ನರ ದೌರ್ಬಲ್ಯವಿರುವುದರಿಂದ ಕಣ್ಣು ಕಾಣುತ್ತಿಲ್ಲ, ಮತ್ತೆ ಬರುವುದಿಲ್ಲ ಎಂದು ಹೇಳಿದ್ದಾರೆ. ಒಂದು ಕಣ್ಣು ಸ್ವಲ್ಪ ಮಾತ್ರ ಕಾಣುತ್ತಿತ್ತು, ಚಿಕ್ಕವರಾಗಿದ್ದಾಗ ಸುಣ್ಣವನ್ನು ಕಣ್ಣಿಗೆ ಬೀಳಿಸಿಕೊಂಡ ಕಾರಣ ಆ ಕಣ್ಣು ಕೂಡ ಕಾಣದಂತಾಯಿತು. ದೃಷ್ಟಿದೋಷವು ಇವರಿಗೆ ಅನುವಂಶಿಯವಾಗಿ ಬಂದಿರುವುದಲ್ಲ, ಏಕೆಂದರೆ ಇವರ ಮನೆಯಲ್ಲಿ ಮತ್ತು ಇವರ ಸಂಬಂಧಿಕರಿಗೆ ಯಾರಿಗೂ ಕೂಡ ದೃಷ್ಟಿದೋಷದ ಸಮಸ್ಯೆ ಇಲ್ಲ, ಆದರೆ ಅದಿತಿ ಮತ್ತು ಈಕೆಯ ತಮ್ಮನಿಗೆ ಕೂಡ ಕಣ್ಣಿನ ಸಮಸ್ಯೆಯಿದೆ. ಇವರ ತಂದೆ ತಾಯಿ ದೂರದ ಸಂಬಂಧದಲ್ಲಿ ವಿವಾಹವಾಗಿದ್ದಾರೆ, ಸಂಬಂಧಿಕರಿಗೂ ಕೂಡ ಯಾರಿಗೂ ಕಣ್ಣಿನ ಸಮಸ್ಯೆಗಳಿಲ್ಲ ಆದರೂ ಇವರಿಗೆ ಮತ್ತು ಇವರ ತಮ್ಮನಿಗೆ ಕಣ್ಣಿನ ಸಮಸ್ಯೆಯಿದೆ. ನರದೌರ್ಬಲ್ಯ ಮತ್ತು ಅಪೌಷ್ಠಿಕತೆ ಇವರ ಕಣ್ಣಿನ ಸಮಸ್ಯೆಗೆ ಕಾರಣವಾಗಿರಬಹುದೆಂದು ವೈದ್ಯರು ತಿಳಿಸಿದ್ದಾರೆ. ಅದಿತಿಯರವರು ಅಂಗವಿಕಲ ಕಲ್ಯಾಣ ಇಲಾಖೆಯಿಂದ ವಿಕಲತೆಯ ಪ್ರಮಾಣ ಪತ್ರವನ್ನು ಪಡೆದುಕೊಂಡಿದ್ದು ಇದರಿಂದ ಅವರಿಗೆ ವಿದ್ಯಾಭ್ಯಾಸ ಮಾಡಲು ಹಣದ ಸಹಾಯವಾಗುತ್ತಿದೆ. ಮನೆಯಲ್ಲಿ ಪೋಷಕರು ಅದಿತಿಯರವರನ್ನು ಪ್ರೀತಿಯಿಂದ ನೋಡಿಕೊಂಡರೂ ಕೂಡ ತಮ್ಮನಿಗೆ ಹೆಚ್ಚಿನ ಒಲವನ್ನು ತೋರುವುದು ಅವರ ಮಾತುಗಳಲ್ಲಿ ವ್ಯಕ್ತವಾಯಿತು. ಸಮಾಜದಲ್ಲಿ ದೃಷ್ಟಿದೋಷವಿರುವ ಹೆಣ್ಣು ಮಕ್ಕಳು ಗಂಡುಮಕ್ಕಳಿಗಿಂತ ಹೆಚ್ಚಿನ ಸಮಸ್ಯೆಗಳನ್ನು ಅನುಭವಿಸುತ್ತಾರೆ ಎಂಬುದು ಅದಿತಿಯವರ ಅಭಿಪ್ರಾಯ. ಸುರಕ್ಷತೆಯ ವಿಷಯಗಳಲ್ಲಿ ಸಾಮಾನ್ಯ ಹೆಣ್ಣು ಮಕ್ಕಳಿಗೆ ಹೆಚ್ಚಿನ ತೊಂದರೆಗಳಿವೆ ಎಂದಾದರೆ ಇನ್ನು ದೃಷ್ಟಿಸವಾಲುಳ್ಳ ಹೆಣ್ಣು ಮಕ್ಕಳಿಗೆ ರಕ್ಷಣೆಯ ಅಗತ್ಯತೆ ತುಂಬಾ ಇರುತ್ತದೆ. ಅದಿತಿಯರವರು ತಮ್ಮ ಜೀವನದ ಕಹಿಯ ಘಟನೆಗಳ ಬಗ್ಗೆ ಮಾತನಾಡುತ್ತಾ ತಮ್ಮ ಅನುಭವಗಳನ್ನು ಹಂಚಿಕೊಂಡರು. ಅದಿತಿ ಅವರು ರಜೆಗೆ ಮನೆಗೆ ಹೋದಾಗ ಅಲ್ಲಿ ಅವರ ತಂದೆ ತಾಯಿ

ಹೊಸ ಮನೆಯನ್ನು ಕಟ್ಟಿಸಿದ್ದರು.ಮನೆಯ ಕೆಲಸ ಇನ್ನು ಪೂರ್ಣಗೊಂಡಿರಲಿಲ್ಲ. ಇವರ ಕುಟುಂಬದವರು ಹೊಸ ಮನೆಯಲ್ಲಿ ಇದ್ದುಕೊಂಡೆ ಮನೆಯ ಅಪೂರ್ಣಗೊಂಡ ಕೆಲಸಗಳನ್ನು ಮಾಡಿಸುತ್ತಿದ್ದರು. ಒಂದು ದಿನ ಅಪ್ಪ ಮತ್ತು ಅಮ್ಮ ಕೆಲಸಕ್ಕಾಗಿ ಹೊರಗೆ ಹೋಗಿದ್ದರು, ಮನೆಯಲ್ಲಿ ಅದಿತಿ ಒಬ್ಬರೆ ಇದ್ದರು, ಆಗ ಮನೆಗೆ ಬಾಗಿಲ ರಿಪೇರಿ ಕೆಲಸಕ್ಕೆ ಬಂದ ಮರಗೆಲಸದವನು ಅದಿತಿ ಒಬ್ಬಳೆ ಇರುವುದನ್ನು ಗಮನಿಸಿ ಅದಿತಿಯೊಡನೆ ಕೆಟ್ಟದಾಗಿ ನೆಡೆದುಕೊಳ್ಳಲು ಪ್ರಾರಂಭಿಸಿದ. ಅಸಭ್ಯವಾಗಿ ವರ್ತಿಸತೊಡಗಿದ, ಅದಿತಿ ಜೋರಾಗಿ ಕಿರುಚಾಡಿ ಅವನಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿದರು, ಅಷ್ಟರಲ್ಲಿ ಹೊರಗೆ ಹೊಗಿದ್ದ ಅದಿತಿ ಅವರ ತಾಯಿ ಮನೆಗೆ ಬಂದು ಅವರನ್ನು ರಕ್ಷಿಸಿ, ಆತನಿಗೆ ಚೆನ್ನಾಗಿ ಬೈದು ಕಳುಹಿಸಿದ್ದಾರೆ. ಈ ವಿಷಯ ಹೊರಗೆ ಗೊತ್ತಾದರೆ ಮಾನ, ಮರ್ಯಾದೆ ಹೊಗುತ್ತದೆ ಎಂದು ಅದಿತಿ ಅವರ ಅಪ್ಪ ಅಮ್ಮ ಇಬ್ಬರೂ ಈ ವಿಷಯ ಯಾರಿಗೂ ಗೊತ್ತಾಗದ ಹಾಗೆ ತಮ್ಮಲ್ಲೇ ಮುಚ್ಚಿಟ್ಟುಕೊಂಡರು. ಅಂದಿನಿಂದ ಅದಿತಿ ಅವರನ್ನು ಒಬ್ಬಳೆ ಎಲ್ಲಿಯೂ ಬಿಡುವುದಿಲ್ಲ, ಎಲ್ಲಿಯೂ ಕಳಿಸುವುದೂ ಇಲ್ಲ. ಸ್ವಂತ ಹತ್ತಿರದ ಸಂಬಂಧಿಕರ ಮನೆಗೂ ಕೂಡ ಅದಿತಿ ಅವರನ್ನು ಕಳುಹಿಸುವುದಿಲ್ಲ. ಈ ಒಂದು ಘಟನೆ ಅದಿತಿ ಮತ್ತು ಅವರ ಅಪ್ಪ, ಅಮ್ಮನ ಮನಸ್ಸಿನಲ್ಲಿ ಮರೆಯಲಾರದ ಕಹಿ ಘಟನೆಯಾಗಿ ಉಳಿದು, ಅವರ ಮನದಲ್ಲಿ ಶಾಶ್ವತ ಭಯವನ್ನು ನೆಲೆಗೊಳ್ಳುವಂತೆ ಮಾಡಿದೆ. ಸ್ವಾತಂತ್ರ್ಯವಾಗಿ ಆಡಿ, ನಲಿಯಬೇಕಾಗಿದ್ದ ಅದಿತಿ ಪಂಜರದ ಗಿಳಿಯಂತೆ, ಭಯದಿಂದಲೇ ಬದುಕು ನಡೆಸುವಂತಾಗಿದೆ.

ಅದಿತಿ 3ನೇ ತರಗತಿಯವರೆಗೂ ಸಾಮಾನ್ಯ ಶಾಲೆಯಲ್ಲಿಯೇ, ಸಮನ್ವಯ ಶಿಕ್ಷಣವನ್ನು ಪಡೆಯುತ್ತಿದ್ದರು. ಆದರೆ ಆ ಶಾಲೆಯ ಶಿಕ್ಷಕರ ಸಹಕಾರ ಮತ್ತು ಪ್ರೋತ್ಸಾಹ ಸರಿಯಾಗಿ ಸಿಗದ ಕಾರಣ ಹಾಗೂ ಆ ಶಾಲೆಯಲ್ಲಿ ಇತರೆ ವಿದ್ಯಾರ್ಥಿಗಳು ಅದಿತಿಯರವರನ್ನು ನೋಡಿ ಅಣಕಿಸುತ್ತಿದ್ದರು, ಅದಿತಿ ಅವರೊಂದಿಗೆ ಹೆಚ್ಚು ಬೆರೆಯುತ್ತಿರಲ್ಲಿಲ್ಲ ಇದರಿಂದ ಅದಿತಿ ತುಂಬಾ ನೋಂದಿದ್ದರು. ಆದ್ದರಿಂದ ಅದಿತಿ ಅವರನ್ನು ಅಂಧ ಹೆಣ್ಣು ಮಕ್ಕಳಿಗಾಗಿಯೇ ಇರುವ ರಂಗರಾವ್ ಸ್ಮಾರಕ ವಿಕಲಚೇತನರ (ಅಂಧ ಹೆಣ್ಣು ಮಕ್ಕಳ) ವಸತಿಸಹಿತ ಶಾಲೆ ಮೇಟಗಳ್ಳಿ, ಮೈಸೂರು, ಇಲ್ಲಿಗೆ ತಂದು ಸೇರಿಸಲಾಯಿತು. ರಂಗರಾವ್ ಶಾಲೆಯಲ್ಲಿ ಅದಿತಿ ಅವರು ಬ್ರೈಲ್ ಲಿಪಿಯನ್ನು ಕಲಿಯದೆ ಇರುವ ಕಾರಣ ಅವರನ್ನು ಮತ್ತೆ 1 ನೇ ತರಗತಿಯಿಂದಲೇ ಶಾಲೆಗೆ ಸೇರಿಸಿಕೊಳ್ಳಲಾಯಿತು. ಈ ಶಾಲೆಗೆ ಸೇರಿದ ನಂತರ ಈ ಶಾಲೆಯಲ್ಲಿಯೇ ಇರುವ ಹಾಸ್ಟೇಲ್‌ನಲ್ಲಿ ಉಳಿದುಕೊಂಡರು. ಬ್ರೈಲ್ ಲಿಪಿ ಕಲಿತರು, ಶಿಕ್ಷಕರು ಆಯ್ಕೆ ಮಾಡುವ ಎಲ್ಲಾ ಸಹ ಪಠ್ಯ ಚಟುವಟಿಕೆಗಳಲ್ಲಿ ಭಾಗವಹಿಸುತ್ತಾ, ಅಂತರಶಾಲಾ ಸ್ಪರ್ಧೆಗಳಲ್ಲಿ ಸಂಗೀತ ಮತ್ತು ನೃತ್ಯದಲ್ಲಿ ಬಹುಮಾನವನ್ನು ಪಡೆದುಕೊಂಡಿದ್ದಾರೆ. ಅಂಗವಿಕಲರ ಕಲ್ಯಾಣ ಇಲಾಖೆಯಿಂದ ವಿಕಲತೆಯ ಪ್ರಮಾಣಪತ್ರವನ್ನು ಪಡೆದಿರುವುದರಿಂದ ಇವರಿಗೆ 1400 ರೂಪಾಯಿಗಳ ಮಾಸಿಕ ಪೋಷಣಾ ಭತ್ಯೆ ಕೂಡ ಬರುತ್ತಿದೆ. ಜೊತೆಗೆ ಹಾಸ್ಟೆಲ್, ಊಟದ ವ್ಯವಸ್ಥೆ, ಓದುವ ಸಾಮಗ್ರಿಗಳು, ಬರೆಯುವ ಸಾಮಗ್ರಿಗಳು, ಸಮವಸ್ತ್ರ ಮೊದಲಾದ ಅಗತ್ಯ ವಸ್ತುಗಳೆಲ್ಲವು ಉಚಿತವಾಗಿ ದೊರೆಯುತ್ತಿವೆ. ಶಾಲೆಯಲ್ಲಿ ವಾರಕ್ಕೆ 2 ಬಾರಿ ವೈದ್ಯಕೀಯ ತಪಾಸಣೆ, ಪ್ರಥಮ ಚಿಕಿತ್ಸೆ, ಶಿಕ್ಷಕರು ನೀಡುವ ಶಿಕ್ಷಣ ಹಾಗೂ ಎಲ್ಲಾ ರೀತಿಯ ಸಹಕಾರ, ಉತ್ತಮ ಗ್ರಂಥಾಲಯ ವ್ಯವಸ್ಥೆ, ಶುದ್ದ ಕುಡಿಯುವ ನೀರು ಮತ್ತು ಶೌಚಾಲಯ ವ್ಯವಸ್ಥೆಗಳು ಇದ್ದು, ಅದಿತಿಯವರಿಗೆ ಅವುಗಳ ಮೆಚ್ಚುಗೆ ಇದೆ.

ಇವರ ಹಾಸ್ಟೆಲ್ ಜೀವನವನ್ನು ನೋಡುವಾಗ 55 ಜನ ವಿದ್ಯಾರ್ಥಿನಿಯರು ಒಂದು ದೊಡ್ಡ ಕೊಠಡಿಯಲ್ಲಿ ವಾಸವಾಗಿದ್ದಾರೆ. ಎಲ್ಲರಿಗೂ ಪ್ರತ್ಯೇಕ ಮಂಚ ಮತ್ತು ಹಾಸಿಗೆ ವ್ಯವಸ್ಥೆಗಳಿವೆ. ಚಲನವಲನದ ಆಧಾರದ ಮೇಲೆ ವಿದ್ಯಾರ್ಥಿಗಳು ತಮ್ಮ ತಮ್ಮ ಕೆಲಸಗಳನ್ನು ನಿರ್ವಹಿಸಿಕೊಳ್ಳುವಂತೆ ಅವರಿಗೆ ತರಬೇತಿ ನೀಡಲಾಗಿರುತ್ತದೆ. ಸದಾ ಸ್ನೇಹಿತರೊಡನೆ ಇರಲು ಬಯಸುವ ಅದಿತಿ ಹಾಸ್ಟೇಲ್‌ನಲ್ಲಿ ಇತರೆ ಸ್ನೇಹಿತರು ಜಗಳವಾಡಿದಾಗ ಬೇಸರಗೊಳ್ಳುತ್ತಾರೆ. ಐ.ಎ.ಎಸ್. ಅಧಿಕಾರಿಯಾಗಬೇಕೆಂದು ಮಹಾತ್ವಾಕಾಂಕ್ಷೆಯನ್ನು ಹೊಂದಿರುವ ಅದಿತಿಯರವರು ತಮ್ಮ ಬಿಡುವಿನ ವೇಳೆಯನ್ನು ಓದುವುದರಲ್ಲಿ ಮತ್ತು ಸ್ನೇಹಿತರೊಂದಿಗಿದ್ದು ಕಳೆಯುತ್ತಾರೆ. ಒಟ್ಟಾರೆ ಅದಿತಿಯರವರು ಸಮಸ್ಯೆಗಳ ನಡುವೆಯು ಸಾಧಿಸುವ ಛಲದೊಂದಿಗೆ ಸಾಗುತ್ತಿರುವುದು ಹೆಮ್ಮೆಯ ವಿಷಯವಾಗಿದೆ.

"ಆ ಘಟನೆ ನನ್ನ ಜೀವನದ ಸ್ವಾತಂತ್ರ್ಯವನ್ನೆ ಕಿತ್ತುಕೊಂಡಿತು. ನಮ್ಮಂಥವರಿಗೆ ದೇವರು ಏಕೆ ಹೀಗೆ ಮಾಡುತ್ತಾನೆ ಎಂಬುದು ಅದಿತಿ ಅವರ ಪ್ರಶ್ನೇ".

ಅದಿತಿ ಪೋಷಕರು ತಮ್ಮ ಮಕ್ಕಳಲ್ಲಿಯೇ ಭೇದ–ಭಾವ ಮಾಡುತ್ತಾ, ತಾರತಮ್ಯ ಮಾಡುವುದು ತಿಳಿದು ಬಂದಿದೆ. ದೃಷ್ಟಿಸವಾಲುಳ್ಳ ಮಕ್ಕಳನ್ನು ಸಮಾಜದಲ್ಲಿ ನೋಡುವ ರೀತಿ ಸಾಮಾನ್ಯವಾಗಿ ತಿರಸ್ಕಾರದ ಭಾವನೆಯಿಂದಾಗಿರುತ್ತದೆ, ದೃಷ್ಟಿಸವಾಲುಳ್ಳ ಹೆಣ್ಣು ಮಕ್ಕಳು ಹಲವು ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ದೃಷ್ಟಿಸವಾಲುಳ್ಳ ಹೆಣ್ಣು ಮಕ್ಕಳು ಹೆಣ್ಣು ಮತ್ತು ದೃಷ್ಟಿಸವಾಲುಳ್ಳವರು ಎಂಬ ಎರಡು ಕಾರಣಗಳಿಂದಲೂ ಶೋಷಣೆಗಳಿಗೆ ಒಳಗಾಗುತ್ತಾರೆ. ಲೈಂಗಿಕ ದೌರ್ಜನ್ಯ ಮಾಡುವವರಿಗೆ ಅಂಗವಿಕಲರು, ದೃಷ್ಟಿಸವಾಲುಳ್ಳವರು, ಮಕ್ಕಳು ಏನು ಸಹ ಲೆಕ್ಕಕ್ಕೆ ಬರುವುದಿಲ್ಲ, ಕೇವಲ ಹೆಣ್ಣಾಗಿದ್ದರೆ ಸಾಕು ಎನ್ನುವ ಮನೋಭಾವವಿರುತ್ತದೆ. ಮಾನವೀಯತೆಯನ್ನೆ ಮರೆತಿರುತ್ತಾರೆ. ಅದಕ್ಕೆ ಉದಾಹರಣೆಯಾಗಿ ಅದಿತಿ ಅವರ ಪ್ರಸಂಗವನ್ನೆ ನೋಡಬಹುದು. ಹಾಗೆ 'ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಹಾಕುವುದು' ಎಂಬ ಗಾದೆ ಮಾತಿನಂತೆ ಯಾರೋ ಮಾಡಿದ ತಪ್ಪಿಗೆ ಏನು ತಪ್ಪು ಮಾಡದ ಅದಿತಿ ಅವರನ್ನು ಈ ಘಟನೆ ಸಂಭವಿಸಿದ ನಂತರ ಪೋಷಕರು ಅದಿತಿಯನ್ನು ಮತ್ತಷ್ಟು ರಕ್ಷಣೆ ಮಾಡಲು ಪ್ರಯತ್ನಿಸತೊಡಗಿದರು. ಆಕೆಯನ್ನು ಒಬ್ಬಂಟಿಯನ್ನಾಗಿ ಮಾಡಲಾಯಿತು, ಅದಿತಿಯವರ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳಲಾಯಿತು. ಇದರಿಂದ ಅದಿತಿ ಅವರು ಮಾನಸಿಕವಾಗಿ ಖಿನ್ನತೆಗೆ ಒಳಗಾಗಿರುವು ಕಂಡು ಬಂದಿದೆ. ದೃಷ್ಟಿ ಸವಾಲುಳ್ಳ ವಿದ್ಯಾರ್ಥಿಗಳಿಗೆ ಒಳ್ಳೆಯ ಸ್ಪರ್ಶ ಮತ್ತು ಕೆಟ್ಟ ಸ್ಪರ್ಶ (Safe touch and Bad touch) ಗಳ ಬಗ್ಗೆ ಅರಿವು ಮೂಡಿಸಬೇಕು. ಅವರು ತಮಗಾಗುವ ಕಹಿ ಅನುಭವಗಳನ್ನು, ತಮ್ಮ ಅನಿಸಿಕೆಗಳನ್ನು ಹೇಳಿಕೊಳ್ಳಲು ಅವಕಾಶ ನೀಡುವಂತಾಗಬೇಕು.

**ಪ್ರಕರಣ –2**

14 ವರ್ಷದ ಸಮೀರಾ (ಹೆಸರನ್ನು ಬದಲಾಯಿಸಲಾಗಿದೆ) 7ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದು, ಮುಸ್ಲೀಂ ಧರ್ಮಕ್ಕೆ ಸೇರಿದ ಇವರು ಸುನ್ನಿ ಪಂಥಕ್ಕೆ ಸೇರಿದವರಾಗಿದ್ದಾರೆ. ಮೂಲತಹ ನಗರ ಪ್ರದೇಶದವರಾದ ಇವರು ಪ್ರಸ್ತುತ ರಂಗರಾವ್ ಹಾಸ್ಟೆಲ್‌ನಲ್ಲಿಯೇ ಉಳಿದು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಸಮೀರಾ ತಂದೆ ಕೇರಳದಲ್ಲಿ ವ್ಯಾಪಾರ ಮಾಡುತ್ತಾರೆ. ಸಮೀರಾ 9 ತಿಂಗಳಿಗೆ ದೃಷ್ಟಿದೋಷದ ಸಮಸ್ಯೆಯನ್ನು ಹೊಂದಿದ್ದರಿಂದ ಆಕೆಯ ತಾಯಿ ಸಮೀರಾ ಮತ್ತು ಆಕೆಯ ತಂದೆಯನ್ನು ಬಿಟ್ಟು ಬೇರೆ

ಮದುವೆಯಾದರು. ಹಾಗಾಗಿ ಸಮೀರಾ ತಂದೆ ಕೂಡ ಮತ್ತೊಂದು ಮದುವೆಯಾದರು. ಎರಡನೇ ಹೆಂಡತಿಗೆ 3 ಹೆಣ್ಣು ಮಕ್ಕಳಿವೆ. ತಂದೆ ಎರಡನೇ ಹೆಂಡತಿ ಮತ್ತು ಮಕ್ಕಳ ಜೊತೆ ಬೆಂಗಳೂರಿನಲ್ಲಿದ್ದಾರೆ. ಸಮೀರಾ ತನ್ನ ತಂದೆಯ ತಾಯಿ ಅಂದರೆ ಅಜ್ಜಿಯ ಜೊತೆ ಗಂಜಾಂನಲ್ಲಿದ್ದಾರೆ. ರಂಗರಾವ್ ವಸತಿ ಶಾಲೆಯಾಗಿರುವುದರಿಂದ ಸಮೀರಾ ಅಲ್ಲಿಯೇ ಇದ್ದಾರೆ. ರಜೆಯಲ್ಲಿ ಅಜ್ಜಿಯ ಮನೆಗೆ ಬರುತ್ತಾರೆ. ತಂದೆ ಯಾವಗಲಾದರು ಒಮ್ಮೆ ಬಂದು ತಮ್ಮ ತಾಯಿ ಮತ್ತು ಮಗಳು ಸಮೀರಾಳನ್ನು ನೋಡಿಕೊಂಡು ಹೋಗುತ್ತಾರೆ. ಒಂಬತ್ತು ತಿಂಗಳವರೆಗೆ ಚೆನ್ನಾಗಿದ್ದ ಸಮೀರಾ ಒಂಬತ್ತು ತಿಂಗಳ ನಂತರ ಕ್ಯಾನ್ಸರ್ ಗುಳ್ಳೆ ಬಂದು ಒಂದು ಕಣ್ಣು ತೆಗೆಯದಿದ್ರೆ ಮಗು ಉಳಿಯಲ್ಲ ಎಂದು ಡಾಕ್ಟರ್ ಹೇಳಿದ್ದರಿಂದ ಆ ಕಣ್ಣು ತೆಗೆದು ಬೇರೆ ಕಣ್ಣು ಹಾಕಿಸಲಾಯಿತು. ಆದರೆ ಅದು ಕಾಣಿಸುತ್ತಿಲ್ಲ. ಇನ್ನೊಂದು ಕಣ್ಣು ಒಂದು ವರ್ಷದ ಮಗುವಾಗಿದ್ದಾಗ ಕಣ್ಣಿಗೆ ಕಡ್ಡಿ ಚುಚ್ಚಿಕೊಂಡು ಕಣ್ಣಿನ ಗುಡ್ಡೆ ಒಡೆದು ಹೋಯಿತು ಹಾಗಾಗಿ ಇನ್ನೊಂದು ಕಣ್ಣು ಕೂಡ ಕಾಣುತ್ತಿಲ್ಲ. ಪೂರ್ತಿ ಅಂಧತ್ವವನ್ನು ಅನುಭವಿಸುತ್ತಿರುವ ಸಮೀರಾ ಅವರನ್ನು ಆಸ್ಪತ್ರೆಗೆ ತೋರಿಸಿದರೂ ಅದರಿಂದ ಏನು ಪ್ರಯೋಜನವಾಗಲಿಲ್ಲ. ಸಮೀರಾ ಅವರಿಗೆ ದೃಷ್ಟಿದೋಷವು ಅನುವಂಶಿಯವಾಗಿ ಬಂದಿರುವುದಲ್ಲ. ಕುಟುಂಬದವರು ಮತ್ತು ಸಂಬಂಧಿಕರಿಗ್ಯಾರಿಗೂ ಕೂಡ ದೃಷ್ಟಿದೋಷದ ಸಮಸ್ಯೆಯಿಲ್ಲ. ತಂದೆ, ತಾಯಿ ದೂರದ ಸಂಬಂಧದಲ್ಲಿ ವಿವಾಹವಾದರೂ ಕೂಡ ಸಮೀರಾ ಈ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಈ ಸಮಸ್ಯೆಗೆ ಅನಾರೋಗ್ಯ ಮತ್ತು ಅಪಘಾತಗಳೆ ಕಾರಣವಾಗಿವೆ. ಮಲತಾಯಿಯಾಗಿ ಬಂದ ಚಿಕ್ಕಮ್ಮ ಕೂಡ ತಾಯಿಯ ಪ್ರೀತಿ ನೀಡಲಿಲ್ಲ. ಅಪ್ಪ ಕೂಡ ದೂರವಾದರು. ಅಜ್ಜಿಯೇ ಆಸರೆಯಾದರು. ತನ್ನ ದೃಷ್ಟಿದೋಷದಿಂದಾಗಿಯೇ ನಾನು ಎಲ್ಲರನ್ನು ಮತ್ತು ಎಲ್ಲ ಸಂತೋಷವನ್ನು ಕಳೆದುಕೊಂಡೆ ಎಂಬುದು ಸಮೀರಾ ಅವರ ಅಭಿಪ್ರಾಯ. ದೃಷ್ಟಿದೋಷ ಸಮಸ್ಯೆಯಿರುವ ಹುಡುಗಿಯರು ಹುಡುಗರಿಗಿಂತ ಹೆಚ್ಚಿನ ಸಮಸ್ಯೆಗಳನ್ನು ಅನುಭವಿಸುತ್ತಾರೆ ಎಂಬುದು ಸಮೀರಾ ಅಭಿಪ್ರಾಯ. ದೃಷ್ಟಿದೋಷವಿರುವುದರಿಂದ ನಾವು ಸ್ವತಂತ್ರ್ಯವಾಗಿ ಬದುಕಲು ಸಾಧ್ಯವಿಲ್ಲ, ಎಲ್ಲದಕ್ಕೂ ಬೇರೆಯವರ ಮೇಲೆ ಅವಲಂಬನೆ ಆಗಬೇಕು, ಇದು ನನಗೆ ಇಷ್ಟವಿಲ್ಲ. ರಕ್ಷಣೆಯ ವಿಚಾರದಲ್ಲಿ ತುಂಬಾ ಜಾಗರೂಕರಾಗಿರಬೇಕಾಗುತ್ತದೆ, ನನಗೆ ದೃಷ್ಟಿದೋಷವಿರುವುದರಿಂದ ತುಂಬಾ ಬೇಸರವಾಗುತ್ತೆ, ನಾನು ಒಬ್ಬಂಟಿ ಎನ್ನಿಸುತ್ತದೆ ಎನ್ನುತ್ತಾರೆ ಸಮೀರಾ. ಶಾಲೆಯಲ್ಲಿ ಸ್ನೇಹಿತರೊಂದಿಗೆ ಇರಲು ಹೆಚ್ಚು ಇಷ್ಟಪಡುವ ಸಮೀರಾ ಶಾಲೆಯಲ್ಲಿ ಬೋಧನಾ ವ್ಯವಸ್ಥೆ ಉತ್ತಮವಾಗಿದ್ದು, ಶಾಲೆಯ ಶಿಕ್ಷಕರೆಲ್ಲರೂ ಬೆಂಬಲ ನೀಡುತ್ತಾರೆ ಎನ್ನುತ್ತಾರೆ. ಬ್ರೈಲ್ ಲಿಪಿಯನ್ನು ಸಂಪೂರ್ಣವಾಗಿ ಕಲಿತಿರುವ ಇವರು ಬ್ರೈಲ್ ಲಿಪಿಯ ಸಹಾಯದಿಂದಲೇ ವಿಧ್ಯಾಭ್ಯಾಸ ಪಡೆಯುತ್ತಿದ್ದಾರೆ. ಶಿಕ್ಷಕರು ಆಯ್ಕೆ ಮಾಡುವ ಎಲ್ಲಾ ಚಟುವಟಿಕೆ ಮತ್ತು ಕಾರ್ಯಕ್ರಮಗಳಲ್ಲಿ ಸಕ್ರೀಯವಾಗಿ ಭಾಗವಹಿಸುವ ಸಮೀರಾ ಸಂಗೀತಾ ಮತ್ತು ಕ್ರೀಡೆಗಳಲ್ಲಿ ಹಲವಾರು ಶಾಲಾ ಹಂತದ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಸರ್ಕಾರದ ಸೌಲಭ್ಯಗಳ ಬಗ್ಗೆ ತಿಳಿದಿರುವ ಸಮೀರಾ ಅವರು ಅಂಗವಿಕಲ ಕಲ್ಯಾಣ ಇಲಾಖೆಯಿಂದ ವಿಕಲತೆಯ ಪ್ರಮಾಣ ಪತ್ರವನ್ನು ಪಡೆದಿದ್ದು 1400 ರೂಪಾಯಿಗಳನ್ನು ಮಾಸಿಕ ಪೋಷಣಾ ಭತ್ಯೆಯಾಗಿ ಪಡೆಯುತ್ತಿದ್ದಾರೆ. ಶಾಲೆಯಲ್ಲಿ ವಾರಕ್ಕೆ ಎರಡು ಬಾರಿ ವೈದ್ಯಕೀಯ ತಪಾಸಣೆ, ಶುದ್ಧ ಕುಡಿಯುವ ನೀರು, ಪ್ರತ್ಯೇಕ ಶೌಚಾಲಯ ವ್ಯವಸ್ಥೆ, ಗ್ರಂಥಾಲಯ ವ್ಯವಸ್ಥೆ, ಪ್ರಥಮ ಚಿಕಿತ್ಸಾ ಸೌಲಭ್ಯ, ದೂರು ಪೆಟ್ಟಿಗೆ ಸೌಲಭ್ಯ ಎಲ್ಲಾ ಸೌಲಭ್ಯಗಳು ಇವರಿಗೆ ದೊರೆಯುತ್ತಿವೆ.

ಹಾಸ್ಟೆಲ್‌ನಲ್ಲಿ ಇವರಿಗೆ ಅಗತ್ಯವಿರುವ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಉಚಿತವಾಗಿ ನೀಡಲಾಗುತ್ತಿದೆ. ಋತುಚಕ್ರದ ಕೆಲಸಗಳನ್ನೆಲ್ಲ ಸ್ವಂತವಾಗಿ ನಿಭಾಯಿಸುವುದನ್ನು ಕಲಿತಿರುವ ಸಮೀರಾ ಚಲನವಲನದ ಆಧಾರದ ಮೇಲೆ ತಮ್ಮ ಕೆಲಸಗಳನ್ನು ನಿರ್ವಹಿಸಿಕೊಳ್ಳುತ್ತಾರೆ. ಋತುಚಕ್ರದ ಸಂದರ್ಭದಲ್ಲಿ, ಹೊಟ್ಟೆ ನೋವು ಹಾಗೂ ಬೆನ್ನು ನೋವುಗಳನ್ನು ಎದುರಿಸುತ್ತಾರೆ. ವಿರಾಮದ ಸಮಯವನ್ನು ಕ್ರೀಡಾ ಚಟುವಟಿಕೆಗಳು ಮತ್ತು ಸ್ನೇಹಿತರೊಡನೆ ಕಳೆಯುವ ಇವರು ತಮ್ಮ ಶಿಕ್ಷಕಿಯರನ್ನೆ ಆದರ್ಶ ಮಾದರಿಯನ್ನಾಗಿಟ್ಟುಕೊಂಡು ಜೀವನದಲ್ಲಿ ಒಳ್ಳೆಯ ಅಂಶಗಳನ್ನು ರೂಢಿಸಿಕೊಂಡು, ವಿದ್ಯಾಭ್ಯಾಸದಲ್ಲಿ ಅಧಿಕ ಆಸಕ್ತಿವಹಿಸುವ ಮೂಲಕ ತಾನು ಐ.ಎ.ಎಸ್. ಅಧಿಕಾರಿ ಆಗಬೇಕು ಎಂಬ ಮಹಾತ್ವಾಕಾಂಕ್ಷೆ ಹೊಂದಿದ್ದಾರೆ. ಸಮಾಜದಲ್ಲಿ ಹೆಣ್ಣು ಮಗುವಾಗಿ ಹುಟ್ಟುವುದೇ ಶಾಪ ಎಂಬ ಮಾತಿದೆ, ಅದರಲ್ಲೂ ದೃಷ್ಟಿಸವಾಲುಳ್ಳ ಹೆಣ್ಣು ಮಗುವಾಗಿ ಹುಟ್ಟುವುದು ಅದಕ್ಕಿಂತಲ್ಲೂ ದೊಡ್ಡ ಶಾಪ ಎಂಬಂತೆ ಸಮಾಜ ಇವರನ್ನು ನಡೆಸಿಕೊಳ್ಳುವಾಗ ಆ ಅಡೆತಡೆಗಳನ್ನೆಲ್ಲಾ ಮೆಟ್ಟಿ ನಿಲ್ಲುವ ಭರವಸೆಯ ಬೆಳಕು ಇವರಲ್ಲಿ ಕಂಡುಬರುತ್ತಿದೆ. ಸಮೀರಾ ಅವರು ತಮ್ಮದಲ್ಲದ ತಪ್ಪಿಗೆ ಶಿಕ್ಷೆ ಅನುಭವಿಸುತ್ತಿದ್ದಾರೆ ಎಂದೇ ಹೇಳಬಹುದು. ಕಣ್ಣಿನಲ್ಲಿ ಕ್ಯಾನ್ಸರ್ ಗೆಡ್ಡೆ ಇದೆ ಎನ್ನುವ ಕಾರಣಕ್ಕೆ ಕಣ್ಣನ್ನು ತೆಗೆಯಲಾಯಿತು. ಅದು ಸಮೀರಾ ಅವರ ತಪ್ಪಲ್ಲ ಆದರೆ ಇದೆ ಕಾರಣದ ನೆಪದಿಂದಾಗಿ ಅವರು ತಮ್ಮ ತಂದೆ, ತಾಯಿಯ ಪ್ರೀತಿಯಿಂದ ದೂರವಾಗುವಂತಾಯಿತು. ಉತ್ತಮ ಶಿಕ್ಷಣವನ್ನೇನೋ ಪಡೆಯುತ್ತಿದ್ದಾರೆ ಆದರೆ ಒಂಟಿತನ ಇವರನ್ನು ಕಾಡುತ್ತಿದೆ. ಅಜ್ಜಿಯ ಪ್ರೀತಿಯೊಂದೆ ಇವರ ಜೊತೆಗಿರುವುದು. ಸಾಮಾನ್ಯವಾಗಿ ಶಾಲೆಗೆ ರಜೆ ಬಂತು ಎಂದರೆ ಮಕ್ಕಳೆಲ್ಲಾ ತುಂಬಾ ಖುಷಿ ಪಡುತ್ತಾರೆ, ಆದರೆ ಸಮೀರಾ ರಜೆ ಏಕಾದರೂ ಕೊಡುತ್ತಾರೋ ಎಂದು ಬೇಸರ ಮಾಡಿಕೊಳ್ಳುತ್ತಾರೆ. ಮನೆಗೆ ಹೋಗಲು ಇವರಿಗೆ ಇಷ್ಟವಿಲ್ಲ. ಶಾಲೆಯಲ್ಲಿ, ಹಾಸ್ಟೇಲ್‌ನಲ್ಲಿ ಇರುವುದೇ ಇವರಿಗೆ ಖುಷಿ.

ಇಲ್ಲಿ ಸ್ನೇಹಿತರು, ಶಿಕ್ಷಕರು, ವಾರ್ಡನ್, ಅಡಿಗೆಯವರು ಎಲ್ಲರೂ ಇರುತ್ತಾರೆ. ಎಲ್ಲರೂ ಇವರನ್ನು ಚೆನ್ನಾಗಿ ನೋಡಿಕೊಳ್ಳುತ್ತಾರೆ. ಇವರ ಜೊತೆ ಸೇರಿ ಸಮೀರಾ ತಮ್ಮ ನೋವನ್ನೆಲ್ಲಾ ಮರೆಯುತ್ತಿದ್ದಾರೆ. ಪೋಷಕರು ಮಕ್ಕಳದಲ್ಲದ ತಪ್ಪಿಗೆ ಅವರಿಗೆ ಶಿಕ್ಷೆ ನೀಡುವುದು, ಅವರನ್ನು ತಿರಸ್ಕರಿಸುವುದು ಮಕ್ಕಳ ಮೇಲೆ ಆಳವಾದ ಘಾಯವನ್ನುಂಟುಮಾಡುತ್ತದೆ. ಇದು ಇವರ ಬದುಕಿನ ಮೇಲೆ ನಕಾರಾತ್ಮಕ ಪರಿಣಾಮ ಬೀರುವ ಸಾಧ್ಯತೆ ಇದೆ. ಶಾಲೆಯ ವಾತಾವರಣ ಚೆನ್ನಾಗಿದ್ದು, ಉತ್ತಮ ಶಿಕ್ಷಣ ಪಡೆಯುತ್ತಿದ್ದರೂ ಸಹ ತಮ್ಮ ಕುಟುಂಬದಿಂದ ಹುಟ್ಟಿನಿಂದ ಆಶ್ರಯ, ಸುರಕ್ಷತೆ, ಭದ್ರತೆ ಮತ್ತು ವಾತ್ಸಲ್ಯ, ಪ್ರೋತ್ಸಾಹ ಪಡೆಯಬೇಕಿದ್ದ ಇವರು ತಮ್ಮ ಕುಟುಂಬದಿಂದ ತಿರಸ್ಕಾರ, ತಾತ್ಸಾರ ಪಡೆಯುತ್ತಿರುವುದು ಸಮೀರಾ ಅವರ ಮನ್ಸಿನ ಮೇಲೆ ನಕಾರಾತ್ಮಕ ಪರಿಣಾಮ ಬೀರುವುದರ ಜೊತೆಗೆ ಅವರ ಜೀವನ ನಿರ್ವಹಣೆ ಮತ್ತು ಸ್ಥಿತಿ ಗತಿಯ ಮೇಲೆ ಪರಿಣಾಮ ಬೀರುತ್ತಿರುವುದನ್ನು ನೋಡಬಹುದಾಗಿದೆ.

**ಪ್ರಕರಣ –3**

18 ವರ್ಷದ ಗಾಯಿತ್ರಿ ಅವರು ರಂಗರಾವ್ ಸ್ಮಾರಕ ವಿಕಲಚೇತನರ ಶಾಲೆ, ಮೆಟಗಳ್ಳಿ, ಮೈಸೂರು ಇಲ್ಲಿ 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದು, ಕ್ರಿಶ್ಚಿಯನ್ ಧರ್ಮಕ್ಕೆ ಸೇರಿದ ಇವರು ನಗರ ಪ್ರದೇಶದವರಾಗಿದ್ದಾರೆ. ಇವರ ತಂದೆ ಅಧಿಕವಾಗಿ ಕುಡಿತದ ಛಟಕ್ಕೆ ಒಳಗಾಗಿ ಸಾವನ್ನಪ್ಪಿದರು. ತಾಯಿ

ಕೂಡ ಅನಾರೋಗ್ಯದಿಂದ ಸಾವನ್ನಪ್ಪಿದರು. ಗಾಯಿತ್ರಿ ಅವರು ತಂದೆ ತಾಯಿ ನಿಧನರಾದ ನಂತರ ತನ್ನ ಚಿಕ್ಕಪ್ಪ ಮತ್ತು ಚಿಕ್ಕಮ್ಮನ ಜೊತೆ ವಾಸವಾಗಿದ್ದರು. ಗಾಯಿತ್ರಿ ಅವರ ಚಿಕ್ಕಪ್ಪ ಮತ್ತು ಚಿಕ್ಕಮ್ಮ ಗಾಯಿತ್ರಿ ಅವರನ್ನು ಭಿಕ್ಷೆ ಬೇಡಲು ಕಳುಹಿಸುತ್ತಿದ್ದರು. ದಿನಕ್ಕೆ ಒಂದು ಸಾವಿರ ರೂಪಾಯಿಗಳನ್ನು ತರಬೇಕೆಂದು ಶರತ್ತು ವಿದಿಸಿದ್ದರು. ಒಂದು ವೇಳೆ 1000 ರೂಪಾಯಿಗಳನ್ನು ತರದೇ ಇದ್ದರೆ ಬೆಲ್ಟ್ ಬಿಚ್ಚಿ ಹೊಡೆಯುತ್ತಿದ್ದರು. ಸರಿಯಾಗಿ ಊಟ ಕೊಡುತ್ತಿರಲಿಲ್ಲ. ಗಾಯಿತ್ರಿ ಅವರು ಹುಟ್ಟುವಾಗಲೇ ಅಂಧರಾಗಿದ್ದರು. ಯಾವ ಆಸ್ಪತ್ರೆಗಳಿಗೂ ತೋರಿಸಿಲ್ಲ. ಗಾಯಿತ್ರಿಯ ಮನೆಯವರಿಗೆ ಮತ್ತು ಸಂಬಂಧಿಕರಿಗ್ಯಾರಿಗೂ ದೃಷಿದೋಷವಿಲ್ಲ, ಹಾಗಾಗಿ ದೃಷ್ಟಿದೋಷವು ಇವರಿಗೆ ಅನುವಂಶೀಯವಾಗಿ ಬಂದಿರುವುದಲ್ಲ. ಆದರೆ ಗೌರಿಯವರ ತಂದೆ ತಾಯಿಗಳು ಹತ್ತಿರದ ಸಂಬಂಧದಲ್ಲಿಯೇ ವಿವಾಹವಾಗಿದುದ್ದರಿಂದ ದೃಷ್ಟಿದೋಷದ ಸಮಸ್ಯೆ ಬಂದಿರಬಹುದು. ಗಂಗಾ ಅವರು ಅಂಗವಿಕಲ ಕಲ್ಯಾಣ ಇಲಾಖೆಯಿಂದ 1400 ರೂಪಾಯಿಗಳ ಮಾಸಿಕ ಪೋಷಣಾ ಭತ್ಯೆಯನ್ನು ಪಡೆಯುತ್ತಾರೆ.ಅದರಲ್ಲಿ 100 ರೂಪಾಯಿಯನ್ನು ಪೋಸ್ಟ್ ಆಫೀಸಿನವರೆ ಹಿಡಿದುಕೊಂಡು 1300 ರೂಪಾಯಿಗಳನ್ನು ಮಾತ್ರ ಕೊಡುತ್ತಾರೆ. ಆ ದುಡ್ಡನ್ನು ಸಹ ಕುಟುಂಬದವರೆ ಕಿತ್ತುಕೊಳ್ಳುತ್ತಾರೆ. ನನಗೆ ಫ್ರಾಕ್ ತೆಗೆದುಕೊಳ್ಳಬೇಕು ಎಂದು ಇಷ್ಟ ಆದರೆ ಮನೆಯವರೆ ದುಡ್ಡು ಕಿತ್ತುಕೊಳ್ಳುತ್ತಾರೆ ಆದರೆ ನನಗೆ ಏನು ತೆಗೆದುಕೊಡುವುದಿಲ್ಲ ಎನ್ನುತ್ತಾರೆ. ಕುಟುಂಬದವರೆಲ್ಲ ಇವರನ್ನು ಕೆಟ್ಟದಾಗಿ, ತಿರಸ್ಕಾರದಿಂದ ನೋಡುವುದರಿಂದ, ಗಾಯಿತ್ರಿ ಅವರಿಗೆ ಮನೆಗೆ ಹೋಗಲು ಇಷ್ಟವಿಲ್ಲ.

ಗಾಯಿತ್ರಿ ಅವರಿಗೆ ತಮ್ಮ ಕುಟುಂಬದವರ ಬಗ್ಗೆ, ಸಮಾಜದ ಜನರ ಮನೋಧೋರಣೆಯ ಬಗ್ಗೆ ಬೇಸರವಿದೆ. ನನಗೆ ಯಾರು ಇಲ್ಲ, ನಾನು ಒಬ್ಬಂಟಿ ಎಂಬ ಭಾವನೆ ಗಾಯಿತ್ರಿಯವರಲ್ಲಿದೆ. ಶಾಲೆಯಲ್ಲಿ, ಹಾಸ್ಟೆಲ್‌ನಲ್ಲಿ ಎಲ್ಲಾ ಕಡೆಯು ಗಾಯಿತ್ರಿ ಅವರನ್ನು ಪ್ರೀತಿಸುವವರು ಯಾರು ಇಲ್ಲ. ಗೌರಿ ಓದುವುದರಲ್ಲಿ, ಅರ್ಥ ಮಾಡಿಕೊಳ್ಳುವುದರಲ್ಲಿ ಹಿಂದೆ ಇದ್ದಾರೆ ಎಂಬ ಕಾರಣಕ್ಕೆ ಅವರ ಮಾತನ್ನು ಯಾರು ಕೇಳುವುದಿಲ್ಲ, ಯಾರು ಅವರೊಂದಿಗೆ ಸೇರುವುದಿಲ್ಲ. ಗಾಯಿತ್ರಿ ಅವರಿಗೆ ಏಸು ಕ್ರಿಸ್ತ ಎಂದರೆ ಪ್ರಾಣ, ಯಾರಾದರು ಏಸು ಬಗ್ಗೆ ಕೆಟ್ಟದಾಗಿ ಮಾತನಾಡಿದರೆ ಗಾಯಿತ್ರಿ ಅವರಿಗೆ ಸಹಿಸಿಕೊಳ್ಳಲು ಸಾಧ್ಯವಿಲ್ಲ. ಅವರಿಗೆ ಸತ್ತು ಹೋಗಬೇಕು ಎನ್ನುವಷ್ಟು ಬೇಸರವಾಗುತ್ತೆ. ಗಾಯಿತ್ರಿ ಅವರ ಮೇಲೆ ಎರಡು ಬಾರಿ ಲೈಂಗಿಕ ದೌರ್ಜನ್ಯ ನಡೆದಿದೆ. ಒಂದು ಬಾರಿ ಅತ್ಯಾಚಾರವಾಗಿದೆ. ಸಾಕಷ್ಟು ಹಲ್ಲೆಗಳಾಗಿವೆ. ಗಾಯಿತ್ರಿ ಅವರ ಸಂಬಂಧಿಕ ಮಾದೇಶ (ಹೆಸರು ಬದಲಾಯಿಸಲಾಗಿದೆ) ಮನೆಯಲ್ಲಿ ಯಾರು ಇಲ್ಲದ ಸಂಧರ್ಭದಲ್ಲಿ ಗಾಯಿತ್ರಿ ಮೇಲೆ ಅತ್ಯಾಚಾರ ಮಾಡಿದ. ವಿಷಯ ಮನೆಯವರಿಗೆ ತಿಳಿದ ನಂತರ ಗಾಯಿತ್ರಿ ಅವರ ತಂದೆ ಗಾಯಿತ್ರಿಗೆ ಬೆಲ್ಟ್ ಬಿಚ್ಚಿಕೊಂಡು ಹೊಡೆದರು. ಆಗ ಗಾಯಿತ್ರಿ ಅವರ ಅಮ್ಮ ಅವಳು ಕಣ್ಣಿಲ್ಲದವಳು ಅವಳಿಗೇನು ಗೊತ್ತಾಗುತ್ತೆ, ಅವನಿಗೆ ಬೈಬೇಕು ಅಂತ ಗಾಯಿತ್ರಿ ಅಪ್ಪನನ್ನು ಸಮಾಧಾನ ಮಾಡಿ, ಅವನ ಮೇಲೆ ದೂರು (ಕಂಪ್ಲೇಂಟ್) ಕೊಟ್ಟು ಮಾದೇಶನನ್ನು ಜೈಲಿಗೆ ಹಾಕಿಸಿದ್ರು. ಜೈಲಿಂದ ಬಂದ ಮೇಲು ಅವನಿಗೆ ಗಾಯಿತ್ರಿ ಮೇಲೆ ಆಸೆಯಿತ್ತು. ಅವಳನ್ನೆ ಮದುವೆಯಾಗಬೇಕು ಎಂದುಕೊಂಡಿದ್ದ. ಆದರೆ ಮಾದೇಶನ ತಾಯಿ ಗಾಯಿತ್ರಿ ಕುರುಡಿ (ದೃಷ್ಟಿ ದೋಷವಿರುವವಳು), ಅವಳು ಬೇಡ ಎಂದು ಹೇಳಿ ಬೇರೆ ಹುಡುಗಿ ಜೊತೆ ಅವನ ಮದುವೆ ಮಾಡಿದರು. ಅಪ್ಪ, ಅಮ್ಮ ಸತ್ತ ನಂತರ ಚಿಕ್ಕಪ್ಪ, ಚಿಕ್ಕಮ್ಮ ಗಾಯಿತ್ರಿ ಅವರನ್ನು ಭಿಕ್ಷಾಟನೆಗೆ ಕಳುಹಿಸುತ್ತಿದ್ದರು. ದಿನಕ್ಕೆ 1000 ರೂಪಾಯಿಗಳನ್ನು ತರದಿದ್ದರೆ ಬೆಲ್ಟ್‌ನಲ್ಲಿ ಬಡಿಯುತ್ತಿದ್ದರು. ಒಂದು ದಿನ

ಬಿಕ್ಷೆ ಬೇಡುವಾಗ ಟೀ ಅಂಗಡಿ ಹತ್ತಿರ ಒಂದು ಹುಡುಗ ನಾನು ನಿನ್ನನ್ನ ಮದುವೆಯಾಗುತ್ತೀನಿ ಎಂದು ಕುಡಿದು ಗಾಯಿತ್ರಿ ಅವರನ್ನು ಹಿಡಿದುಕೊಳ್ಳೋಕೆ ಬಂದ ಗಾಯಿತ್ರಿ ಕಿರಿಚಿಕೊಂಡು ಓಡಿಹೋದರು, ಆಗ ಅಲ್ಲಿ ಪಕ್ಕದಲ್ಲಿದ್ದವರು ಬಂದು ಅವನನ್ನು ಬೈದು ಕಳುಹಿಸಿದರು. ಇನ್ನೊಂದು ದಿನ ರಸ್ತೆ ದಾಟುವಾಗ ಒಬ್ಬ ಅಪರಿಚಿತ ನಾನು ಸಹಾಯ ಮಾಡುತ್ತೀನಿ ಎಂದು ಬಂದು ಎಲ್ಲೆಲ್ಲೋ ಮುಟ್ಟಲು ಪ್ರಾರಂಭಿಸಿದ ಆಗ ಗಾಯಿತ್ರಿ ಅವರು ಅವನಿಂದ ಬಿಡಿಸಿಕೊಂಡು, ಕಿರುಚಾಡ ತೊಡಗಿದರು ಆಗ ಆತ ಹೆದರಿ ಓಡಿದ. ಭಿಕ್ಷೆ ಕೇಳಲು ಹೋದಾಗ ಎಷ್ಟೋ ಬಾರಿ ಕೆಲವರು ಕಿಡಿಗೇಡಿಗಳು ಹೊಡೆದಿರುವುದು ಉಂಟು. ಹೀಗೆ ಸಾಕಷ್ಟು ನೊಂದಿರುವ ಗಾಯಿತ್ರಿ ಅವರಿಗೆ ಯಾರ ಬಗ್ಗೆಯು ನಂಬಿಕೆ ಇಲ್ಲ, ಎಲ್ಲರೂ ಮೋಸ ಮಾಡುತ್ತಾರೆ, ಎಲ್ಲಾ ಕೆಟ್ಟವರು ಎಂಬ ನಿರ್ಧಾರಕ್ಕೆ ಬಂದಿದ್ದಾರೆ. ಗಾಯಿತ್ರಿ ಮಾನಸಿಕ ಮತ್ತು ದೈಹಿಕವಾಗಿ ಸಾಕಷ್ಟು ನೊಂದಿದ್ದಾರೆ. ಸಮಾಜ, ಕುಟುಂಬ ಮತ್ತು ಯಾವುದರ ಮೇಲೆಯು ನಂಬಿಕೆ ಇಲ್ಲದಂತಾಗಿದೆ. ಏಸು ಕ್ರಿಸ್ತ ಒಬ್ಬನೆ ನನ್ನನ್ನ ಕಾಯುವವನು ಎಂಬುದು ಗಾಯಿತ್ರಿ ಅವರ ನಂಬಿಕೆ. ಗಾಯಿತ್ರಿ ಅವರು ಹುಟ್ಟಿನಿಂದ ದೃಷ್ಟಿದೋಷವನ್ನು ಹೊಂದಿದ್ದರಿಂದ ಗಾಯಿತ್ರಿಯನ್ನು ಶಾಲೆಗೆ ಸೇರಿಸಿರಲಿಲ್ಲ. ಬಿಕ್ಷೆ ಬೇಡುತ್ತಿದ್ದ ಗಾಯಿತ್ರಿ ಅವರ ಬಗ್ಗೆ ತಿಳಿದು ರಂಗರಾವ್ ಶಾಲೆಯ ಶಿಕ್ಷಕರು ಗಾಯಿತ್ರಿಯವರ ಮನೆಗೆ ಹೋಗಿ ಅವರ ಚಿಕ್ಕಪ್ಪ ಮತ್ತು ಚಿಕ್ಕಮ್ಮನನ್ನು ಒಪ್ಪಿಸಿ ಅವರಿಗೆ ಹೀಗೆ ಬಲವಂತವಾಗಿ ಮಕ್ಕಳನ್ನು ಬಿಕ್ಷಾಟನೆಗೆ ಬಳಸಿಕೊಂಡರೆ ಅದು ಕಾನೂನುಬಾಹಿರ, ಶಿಕ್ಷಾರ್ಹ ಅಪರಾಧ ಎಂದು ತಿಳಿ ಹೇಳಿದಾಗ ಅವರಿಗೆ ಭಯವಾಗಿ ಶಿಕ್ಷಕರು ಕಂಪ್ಲೇಂಟ್ ಕೊಟ್ರೆ ತೊಂದರೆ ಎಂದು ಹೇಳಿ ಗಾಯಿತ್ರಿಯವರನ್ನು ಶಾಲೆಗೆ ಸೇರಿಸಲು ಒಪ್ಪಿದರು. ಅಂದಿನಿಂದ ಗಾಯಿತ್ರಿ ರಂಗರಾವ್ ವಸತಿ ಶಾಲೆಗೆ ಸೇರಿಸಲಾಗಿ ಅವರು ಇಲ್ಲಿಯೇ ಉಳಿದುಕೊಂಡರು. ಅವರ ವಯಸ್ಸಿನ ಆಧಾರದ ಮೇಲೆ 4ನೇ ತರಗತಿಗೆ ಗಾಯಿತ್ರಿಯವರನ್ನು ಸೇರಿಸಿಕೊಂಡರು. ಗಾಯಿತ್ರಿಯವರು ಶಾಲೆಯ ಎಲ್ಲಾ ಸಹ ಪಠ್ಯಚಟುವಟಿಕೆಗಳಲ್ಲಿ ಭಾಗವಹಿಸಲು ಆಸಕ್ತಿ ತೋರಿಸುವುದಿಲ್ಲ. ಏಸುವಿನ ಹಾಡುಗಳನ್ನು ಸಭಾಂಗಣದಲ್ಲಿ ಹಾಡುವುದು ತುಂಬಾ ಇಷ್ಟ. ಸಂಗೀತಾ ಮತ್ತು ಕ್ರೀಡೆಗಳಲ್ಲಿ ಶಾಲಾ ಹಂತದ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಶಾಲೆಯಲ್ಲಿ ಶಿಕ್ಷಕರು ತಾರತಮ್ಯ ಮಾಡುವುದು ಇಷ್ಟವಿಲ್ಲ. ಶಾಲೆಯಲ್ಲಿ ವಾರಕ್ಕೆ ಎರಡು ಬಾರಿ ವೈದ್ಯಕೀಯ ತಪಾಸಣೆ ಮಾಡಲು ಬರುತ್ತಾರೆ, ಆದರೆ ನನಗೆ ಹುಷಾರಿಲ್ಲ ಅಂತ ಹೇಳಿದ್ರು ನೀನು ಸುಳ್ಳು ಹೇಳುತ್ತಿದ್ದೀಯ ಅಂತ ಬೈತಾರೆ, ಆಗ ಬೇಸರವಾಗುತ್ತೆ.ಏಸುವನ್ನು ನೆನಪಿಸಿಕೊಂಡು, ಪ್ರಾರ್ಥನೆ ಮಾಡಿ ಮಲಗುತ್ತೀನಿ, ಬೆಳ್ಳಿಗ್ಗೆ ಏಳುವುದರೊಳಗೆ ಹುಷಾರಾಗಿರುತ್ತೀನಿ ಎಂಬುದು ಗಾಯಿತ್ರಿ ಅವರ ಮನದ ಮಾತು. ಶಾಲೆಯಲ್ಲಿ ಎಲ್ಲಾ ವ್ಯವಸ್ಥೆಗಳು/ಸೌಲಭ್ಯಗಳು ಉತ್ತಮವಾಗಿವೆ ಎನ್ನುವ ಗಾಯಿತ್ರಿ ನಾನು ಎಷ್ಟೇ ಓದಿದರೂ ಸಹ ನೆನಪಿನಲ್ಲಿ ಇರೋದಿಲ್ಲ. ಒಂದನ್ನ ನೆನಪಿಸಿಕೊಂಡ್ರೆ ಇನ್ನೊಂದು ಮರೆತು ಹೋಗುತ್ತೆ, ಇರುವ ಪಠ್ಯಕ್ರಮದಲ್ಲಿ ಬದಲಾವಣೆ ಬೇಕು, ಈಗ ಇರುವುದಕ್ಕಿಂತ ಕಡಿಮೆ ಪಠ್ಯಕ್ರಮಗಳಿರಬೇಕು, ಆಗ ನಮಗೆ ಓದಲು ಸುಲಭವಾಗುತ್ತದೆ ಎಂಬುದು ಗಾಯಿತ್ರಿಯವರ ಅನಿಸಿಕೆ.

ಹಾಸ್ಟೇಲ್‌ನಲ್ಲಿ 35 ವಿದ್ಯಾರ್ಥಿನಿಯರಿಗೆ ಒಂದು ದೊಡ್ಡ ಹಾಲ್‌ನಲ್ಲಿ ಮಂಚ ಮತ್ತು ಹಾಸಿಗೆಯ ವ್ಯವಸ್ಥೆ ಮಾಡಲಾಗಿದೆ. ಊಟದ ವ್ಯವಸ್ಥೆ ಉತ್ತಮವಾಗಿರುವುದಿಲ್ಲ, ರಾತ್ರಿ ವೇಳೆ ಹಾಸ್ಟೆಲ್‌ನಲ್ಲಿ ಭಯವಾಗುತ್ತೆ. ಸ್ನೇಹಿತರು ಸಹ ಹೊಂದಿಕೊಳ್ಳುವುದಿಲ್ಲ. ಅಮ್ಮ ನೆನಪಾಗುತ್ತಾರೆ ಆದರೆ ಅವರು ಈಗ ಇಲ್ಲ, ಮನೆಗೆ ಹೋಗೋಕು ಬೇಜಾರು, ಹಾಸ್ಟೆಲ್‌ನಲ್ಲಿ ಇರೋಕು ಬೇಜಾರು ಎನ್ನುತ್ತಾರೆ ಗಾಯಿತ್ರಿ ಚಲನವಲನದ

ಸಹಾಯದಿಂದ ಕಾರ್ಯ ನಿರ್ವಹಿಸುವ ಗಾಯಿತ್ರಿಯವರು ವಿರಾಮದ ವೇಳೆಯಲ್ಲಿ ಏಸು ಕುರಿತು ಪ್ರಾರ್ಥನೆ ಮಾಡುತ್ತಾರೆ. ಮದುವೆ ಮತ್ತು ಸಂಬಂಧಗಳ ಬಗ್ಗೆ ತಿರಸ್ಕಾರದ ಭಾವನೆ ಹೊಂದಿರುವ ಗಾಯಿತ್ರಿಯವರು ಕ್ರಿಶ್ಚಿಯನ್ ಸಿಸ್ಟರ್ ಆಗಬೇಕು ಎಂಬ ಮಹಾತ್ವಾಕಾಂಕ್ಷೆ ಹೊಂದಿದ್ದಾರೆ.

ರಂಗರಾವ್ ಶಾಲೆಯ ಶಿಕ್ಷಕರ ಸತತ ಪ್ರಯತ್ನದಿಂದಾಗಿ ಇವರನ್ನು ಶಾಲೆಗೆ ಸೇರಿಸಲಾಯಿತು. ಶಾಲೆಗೆ ಸೇರಿದ ನಂತರ ಕುಟುಂಬದವರು ನೀಡುವ ಕಿರುಕುಳ ಕಡಿಮೆಯಾದರೂ ಗಾಯಿತ್ರಿಯವರಿಗೆ ಬರುವ ಮಾಸಿಕ ಪೋಷಣಾ ಭತ್ಯೆಯನ್ನು ಮನೆಯವರಿಗೆ ಕೊಡಬೇಕು. ಕೊಡದಿದ್ದರೆ ರಜೆಗೆ ಹೋದಾಗ ಮನೆಗೆ ಸೇರಿಸುವುದಿಲ್ಲ, ಹೊಡೆಯುತ್ತಾರೆ. ಇಷ್ಟೆ ಅಲ್ಲದೆ ಗಾಯಿತ್ರಿಯವರ ಮೇಲೆ ಹಲವು ಬಾರಿ ಲೈಂಗಿಕ ದೌರ್ಜನ್ಯ ಕೂಡ ಆಗಿದೆ. ಬಡತನ, ಬಿಕ್ಷಾಟನೆ, ದೈಹಿಕ ಹಲ್ಲೆ ಮತ್ತು ಮಾನಸಿಕ ಹಿಂಸೆಗಳಿಂದ ನೊಂದಿರುವ ಗಾಯಿತ್ರಿಯವರು ಕುಟುಂಬದವರಿಂದ ಮತ್ತು ಸಮಾಜದಿಂದ ಸಾಕಷ್ಟು ರೀತಿಯ ತೊಂದರೆಗಳನ್ನು ಅನುಭವಿಸಿದ್ದಾರೆ. ಮನೆ ನನಗೆ ನರಕ ಎನ್ನುತ್ತಾರೆ. ಶಾಲೆಯಲ್ಲಿಯೂ ಸಹ ನಿಧಾನ ಕಲಿಕೆಯ ವಿದ್ಯಾರ್ಥಿನಿ ಅಗಿರುವುದರಿಂದ ಕೆಲವೊಮ್ಮೆ ಶಿಕ್ಷಕರ ಕೋಪ ಮತ್ತು ತಿರಸ್ಕಾರಗಳಿಗೆ ಒಳಗಾಗುತ್ತಾರೆ ಹಾಗಾಗಿ ಶಾಲೆಯಲ್ಲಿಯೂ ಸಹ ಯಾರ ಮೇಲು ನಂಬಿಕೆ, ಪ್ರೀತಿ, ವಿಶ್ವಾಸಗಳಿಲ್ಲ. ಸ್ನೇಹಿತರು ಸಹ ಇವರನ್ನು ಅಣಕಿಸುವುದು, ಬೈಯುವುದು, ಇವರೊಂದಿಗೆ ಜಗಳವಾಡುವುದು ಮಾಡುವುದರಿಂದ ಯಾರು ಆತ್ಮೀಯ ಸ್ನೇಹಿತರು ಕೂಡ ಇಲ್ಲ. ಯಾವಾಗಲೂ ಒಬ್ಬರೇ ಇರಲು ಇಷ್ಟಪಡುತ್ತಾರೆ. ತಾವು ಒಬ್ಬಂಟಿ ಎಂದು ದುಃಖ ಪಡುತ್ತಾರೆ. ಸಮಾಜದಲ್ಲಿ ದೃಷ್ಟಿಸವಾಲುಳ್ಳವರು ಬದುಕುವುದು ಕಷ್ಟ, ಅದರಲ್ಲೂ ದೃಷ್ಟಿಸವಾಲುಳ್ಳ ಹೆಣ್ಣು ಮಕ್ಕಳಿಗೆ ಹೆಚ್ಚು ತೊಂದರೆಗಳಿರುತ್ತವೆ ಎಂಬುದು ಗಾಯಿತ್ರಿಯವರ ಅಭಿಪ್ರಾಯ. ಏಸು ಒಬ್ಬನೇ ತನ್ನನ್ನು ಎಲ್ಲಾ ಸಂದರ್ಭಗಳಲೂ ರಕ್ಷಿಸುತ್ತಾನೆ ಎಂಬುದು ಗಾಯಿತ್ರಿಯವರ ನಂಬಿಕೆ. ತಂದೆ ತಾಯಿಗಳು ಇರುವ ದೃಷ್ಟಿಸವಾಲುಳ್ಳ ಹೆಣ್ಣು ಮಕ್ಕಳ ಸ್ಥಿತಿಯೇ ಕಷ್ಟಕರವಾಗಿರುವಾಗ ಇನ್ನು ತಂದೆ ತಾಯಿಗಳಿಲ್ಲದ ದೃಷ್ಟಿಸವಾಲುಳ್ಳ ಹೆಣ್ಣು ಮಕ್ಕಳ ಸ್ಥಿತಿ ಇನ್ನು ಚಿಂತಾಜನಕವಾಗಿರುತ್ತದೆ ಎಂಬುದಕ್ಕೆ ಗಾಯಿತ್ರಿಯವರ ಜೀವನ ಉದಾಹರಣೆಯಾಗಿದೆ. ದೃಷ್ಟಿಸವಾಲುಳ್ಳ ಬಾಲಕಿಯರು ಸಮಾಜದ, ಕುಟುಂಬದ ತಿರಸ್ಕಾರವನ್ನಷ್ಟೇ ಅಲ್ಲದೆ ದೈಹಿಕ, ಮಾನಸಿಕ ಮತ್ತು ಲೈಂಗಿಕ ಶೋಷಣೆಗಳಿಗೆ ತುತ್ತಾಗುತ್ತಾರೆ ಎಂಬುದು ಇವರ ಪ್ರಕರಣದಿಂದ ತಿಳಿದುಬರುತ್ತದೆ. ಲೈಂಗಿಕ ದೌರ್ಜನ್ಯವೆಸಗಿದ ವ್ಯಕ್ತಿ ಆರಾಮವಾಗಿ ಯಾವ ಶಿಕ್ಷೆಯು ಇಲ್ಲ, ಅಪರಾಧಿ ಭಾವವು ಇಲ್ಲದೆ ಮತ್ತೊಂದು ಮದುವೆಯಾಗಿ ಖುಷಿಯಾಗಿ ಜೀವನನ್ನು ನಡೆಸುತ್ತಿದ್ದಾನೆ. ಆದರೆ ದೌರ್ಜನ್ಯಕ್ಕೆ ಒಳಗಾದ ಈಕೆ ಮಾತ್ರ ಅದರಿಂದ ಹೊರಬರಲಾರದೆ ಮಾನಸಿಕವಾಗಿ ಹಿಂಸೆ ಅನುಭವಿಸುತ್ತಾ ಜೀವನದಲ್ಲಿ ಜಿಗುಪ್ಸೆ ಹೊಂದಿ ನಿರಾಶಾಭಾವದಿಂದ ಬದುಕುವುದನ್ನು ನೋಡಬಹುದಾಗಿದೆ. ಹೀಗೆ ದೃಷ್ಟಿಸವಾಲುಳ್ಳ ವಿದ್ಯಾರ್ಥಿನಿಯರ ಸ್ಥಿತಿಗತಿಗಳು ಶೋಚನೀಯವಾಗಿದ್ದು, ದೃಷ್ಟಿಸವಾಲುಳ್ಳ ವಿದ್ಯಾರ್ಥಿಗಳು ಹಲವು ಸವಾಲುಗಳನ್ನು ಎದುರಿಸುತ್ತಾ ಬದುಕುತ್ತಿರುವುದನ್ನು ಗುರುತಿಸಬಹುದಾಗಿದೆ. ಸರ್ಕಾರದ ಸೌಲಭ್ಯಗಳು, ರಂಗರಾವ್‌ನಂತಹ ಸಂಸ್ಥೆಗಳು ಇರುವುದರಿಂದ ಗಾಯಿತ್ರಿ ಅವರು ಶಿಕ್ಷಣ ಪಡೆಯುತ್ತಾ ತಾತ್ಕಾಲಿಕವಾಗಿ ನೆಮ್ಮದಿಯ ಬದುಕು ಬದುಕುತ್ತಿದ್ದಾರೆ. ಹಾಗಾಗಿ ಇಂತಹ ಶಾಲೆಗಳು, ಸಂಸ್ಥೆಗಳು ಹೆಚ್ಚಾಗಿ ಪ್ರಾರಂಭವಾಗಬೇಕು. ಜೊತೆಗೆ ರಂಗರಾವ್ ಶಾಲೆಯಲ್ಲಿ 10ನೇ ತರಗತಿಯವರೆಗೆ ಮಾತ್ರ ಓದಲು ಅವಕಾಶವಿರುವುದರಿಂದ ಗಾಯಿತ್ರಿಯವರ ಮುಂದಿನ ಬದುಕು ಮತ್ತೆ ಹಿಂದಿನಂತೆ ಆಗಬಹುದು. ಹಾಗಾಗಿ

ಆ ಪರಿಸ್ಥಿತಿ ಮರುಕಳಿಸದಂತೆ ತಡೆಯುವ ಸಲುವಾಗಿ, ಇಂತಹ ಮಕ್ಕಳಿಗಾಗಿ ಸರ್ಕಾರ ಮುಂದೆ ಕೂಡ ಇವರಿಗೆ ಅನುಕೂಲವಾಗುವಂತಹ ವ್ಯವಸ್ಥೆಗಳನ್ನು ಮಾಡುವುದು ಅವಶ್ಯಕವಾಗಿದೆ.

**ಪ್ರಕರಣ –4**

14 ವರ್ಷ ವಯಸ್ಸಿನ ಕಾಂಚನಾ ನೇಗಿ (ಮೂಲ ಹೆಸರು ಬದಲಾಯಿಸಲಾಗಿದೆ 6ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದು, ಇವರು ಗ್ರಾಮೀಣ ಪ್ರದೇಶದರಿಂದ ಬಂದಿರುವವರಾಗಿದ್ದಾರೆ .ಪ್ರಸ್ತುತ ರಂಗರಾವ್ ಹಾಸ್ಟೆಲ್‌ನಲ್ಲಿಯೇ ಇದ್ದಾರೆ. ಇವರದ್ದು ಅವಿಭಕ್ತ ಕುಟುಂಬವಾಗಿದ್ದು, ಅಜ್ಜಿ, ತಾತ, ತಂದೆ, ತಾಯಿ, ಚಿಕ್ಕಪ್ಪ, ಚಿಕ್ಕಮ್ಮ, ಚಿಕ್ಕಪ್ಪನ ಮಕ್ಕಳು ಎಲ್ಲಾ ಒಟ್ಟಿಗೆ ಒಂದೇ ಮನೆಯಲ್ಲಿದ್ದಾರೆ. ತಂದೆ ವೆಲ್ಡಿಂಗ್ ಕೆಲಸ ಮಾಡುತ್ತಾರೆ. ತಾಯಿ ನಿಧನರಾಗಿದ್ದು, ತಂದೆ ಎರಡನೇ ಮದುವೆಯಾಗಿದ್ದಾರೆ, ಚಿಕ್ಕಮ್ಮನಿಗೆ ಮೂವರು ಮಕ್ಕಳಿದ್ದಾರೆ. ಚಿಕ್ಕಪ್ಪ ಹೋಟೆಲ್ ನಿರ್ವಹಣೆ ಮಾಡುತ್ತಿದ್ದು ಅವರಿಗೆ ಮೂವರು ಮಕ್ಕಳಿದ್ದಾರೆ.

8 ವರ್ಷದವರೆಗೂ ಆರೋಗ್ಯವಂತರಾಗಿದ್ದ ಕಾಂಚನಾ ನೇಗಿ ತಮ್ಮ 8ನೇ ವಯಸ್ಸಿನಲ್ಲಿ ಬ್ರೈನ್ ಟೂಮರ್‌ಗೆ ಒಳಗಾದರು. ಸತತವಾಗಿ ಒಂದು ತಿಂಗಳು ಜ್ವರ ಬಂತು. ಬ್ರೈನ್ ಟೂಮರ್‌ಗೆ ಶಸ್ತ್ರ ಚಿಕಿತ್ಸೆಯನ್ನು ಮಾಡಿಸಲಯಿತು. ಇದಾದ ನಂತರ ಕಣ್ಣುಗಳು ಕಾಣದಾದವು. ಆಸ್ಪತ್ರೆಗೆ ತೋರಿಸಿದರೂ ಏನು ಮಾಡೋಕಾಗಲ್ಲ ಎಂದರು. ಈಗಲೂ ಸಹ ಬ್ರೈನ್ ಟೂಮರ್‌ಗೆ ಸಂಬಂಧಿಸಿದ ಮಾತ್ರೆಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಇವರ ಕುಟುಂಬದವರು ಹಾಗೂ ಸಂಬಂಧಿಕರಿಗ್ಯಾರಿಗೂ ದೃಷ್ಟಿದೋಷದ ಸಮಸ್ಯೆ ಇಲ್ಲ. ಇವರ ತಾಯಿ ಕಲ್ಪನಾರಿಗೆ 3 ವರ್ಷವಾಗಿದ್ದಾಗ ನಿಧನರಾದರು. ಆಗ ಈಕೆಯ ತಮ್ಮನಿಗೆ 1 ವರ್ಷ, ಅಪ್ಪ ಕಾಂಚನಾರ ತಾಯಿ ನಿಧನರಾದ ನಂತರ ಮತ್ತೊಂದು ಮದುವೆಯಾದರು. ತಂದೆಗೆ ಕಾಂಚನಾರವರನ್ನು ಕಂಡರೆ ಇಷ್ಟವಿಲ್ಲ, ದೃಷ್ಟಿದೋಷ ಇರುವುದರಿಂದ ಕಾಂಚನಾ ಬಗ್ಗೆ ತಿರಸ್ಕಾರವಿದೆ. ಹಾಗಾಗಿ ಕಾಂಚನಾ ಅವರು ಅಜ್ಜಿ, ತಾತನ ಜೊತೆ ಪ್ರತ್ಯೇಕವಾಗಿ ಇದ್ದಾರೆ.ತಾತನ ಸ್ನೇಹಿತರೊಬ್ಬರು ಕಂಚನಾ ಅವರನ್ನು ರಂಗರಾವ್ ಶಾಲೆಗೆ ಸೇರಿಸಿ ನೋಡಿಕೊಳ್ಳುತ್ತಿದ್ದಾರೆ. ಸಮಾಜದಲ್ಲಿ ಜನ ದೃಷ್ಟಿ ಸಮಸ್ಯೆಗಳನ್ನು ಎದುರಿಸುವವರನ್ನು ಭಿನ್ನ ದೃಷ್ಟಿಯಿಂದಲೇ ನೋಡುತ್ತಾರೆ. ತಮ್ಮ ಹುಟ್ಟೂರಿನಲ್ಲಿ ಜನರು ನಿನ್ನ ಕೈಲಿ ಏನು ಆಗಲ್ಲ ಅಂತ ಭಯ ಹುಟ್ಟಿಸುತ್ತಾರೆ. ಆದರೆ ಈ ಶಾಲೆಯಲ್ಲಿ ಮತ್ತು ಹಾಸ್ಟೆಲ್‌ನಲ್ಲಿ ಎಲ್ಲರೂ ನಿನ್ನ ಕೈಲಿ ಸಾಧ್ಯವಿದೆ ಪ್ರಯತ್ನ ಪಡು ಎಂದು ಪ್ರೋತ್ಸಾಹಿಸುತ್ತಾರೆ, ಆಗ ಖುಷಿಯಾಗುತ್ತೆ, ಏನಾದ್ರೂ ಮಾಡಬಹುದು ಏನ್ನಿಸುತ್ತೆ. ನನಗೆ ಮೈಸೂರಿಗೆ ಬಂದು ರಂಗರಾವ್ ಶಾಲೆಗೆ ಸೇರಿದ ಮೇಲೆ ತುಂಬಾ ಆತ್ಮವಿಶ್ವಾಸ ಬಂದಿದೆ. ನಾನು ಏನು ಬೇಕಾದರೂ ಸಾಧಿಸಬಹುದು ಎನ್ನಿಸುತ್ತಿದೆ. ಆದರೆ ಮನೆಯವರೆಲ್ಲ ದೂರ ಇರುವುದರಿಂದ ಮತ್ತು ಇಲ್ಲಿನ ಸ್ನೇಹಿತರ ಜೊತೆ ನನಗೆ ಹೊಂದಿಕೊಳ್ಳಲು ಕಷ್ಟವಾಗುತ್ತಿರುವ ಕಾರಣ ಒಮ್ಮೊಮ್ಮೆ ನಾನು ಒಬ್ಬಂಟಿ ಅನ್ನಿಸುತ್ತದೆ. "ನನಗೆ ಒಬ್ಬಳೆ ಇರಲು ಇಷ್ಟ.ಒಬ್ಬಳೆ ಇದ್ದರೆ ನನಗೆ ಸಮಾಧಾನ, ಮನಸ್ಸಿಗೆ ನೆಮ್ಮದಿ ಸಿಗುತ್ತೆ. ಆದರೆ ದೃಷ್ಟಿದೋಷದ ಸಮಸ್ಯೆ ಇರುವುದರಿಂದ ಎಲ್ಲಾ ಕೆಲಸಗಳಿಗೂ ಬೇರೆಯವರ ಮೇಲೆ ಅವಲಂಭನೆಯಾಗಬೇಕು, ವಿದ್ಯಾಭ್ಯಾಸಕ್ಕೂ ಇದರಿಂದ ತೊಂದರೆಯಾಗುತ್ತದೆ" ಎನ್ನುತ್ತಾರೆ ಕಾಂಚನಾ. ಕಾಂಚನಾ ನೇಗಿ 4ನೇ ತರಗತಿಯವರೆಗೆ ಕ್ರಿಶ್ಚಿಯನ್ ಶಾಲೆಯಲ್ಲಿ ಓದುತ್ತಿದ್ದರು. ಅದು ಸೈಟೆಡ್ ಶಾಲೆಯಾಗಿತ್ತು, 5ನೇ ತರಗತಿಯಿಂದ ಇಲ್ಲಿಗೆ ಬಂದು ಸೇರಿಕೊಂಡರು. ಹಾಗಾಗಿ ಬ್ರೈಲ್ ಲಿಪಿಯನ್ನು ಈಗ

ಕಲಿಯುತ್ತಿದ್ದಾರೆ. ಕ್ರೀಡೆಯಲ್ಲಿ ಆಸಕ್ತಿ ಇಲ್ಲದಿರುವುದರಿಂದ ಸಮಯವಿದ್ದಾಗಲೆಲ್ಲಾ ಕಥೆ ಪುಸ್ತಕಗಳನ್ನು ಓದುತ್ತಾರೆ.

ಶಾಲೆಯಲ್ಲಿ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಸಂಗೀತದಲ್ಲಿ ಹೆಚ್ಚು ಆಸಕ್ತಿ ಇರುವುದರಿಂದ ಸಂಗೀತದಲ್ಲಿ ಶಾಲಾ ಹಂತದ ಪ್ರಶಸ್ತಿಗಳನ್ನು ಪಡೆದಿದ್ದಾರೆ. ವಿಕಲತೆಯ ಪ್ರಮಾಣ ಪತ್ರವನ್ನು ಪಡೆದಿರುವ ಇವರು ಮಾಸಿಕವಾಗಿ 1400 ರೂಪಾಯಿಗಳ ಮಾಸಿಕ ಪೋಷಣಾ ಭತ್ಯೆಯನ್ನು ಪಡೆಯುತ್ತಿದ್ದಾರೆ. ಶಾಲೆ ಮತ್ತು ಹಾಸ್ಟೆಲ್‌ನ ಎಲ್ಲಾ ವ್ಯವಸ್ಥೆಗಳು ಎಲ್ಲಾ ವ್ಯವಸ್ಥೆಗಳು ಮತ್ತು ಸೌಲಭ್ಯಗಳು ಉತ್ತಮವಾಗಿವೆ ಎನ್ನುತ್ತಾರೆ. ಕಾಂಚನಾ ನೇಗಿ ಚಲನವಲನದ ಸಹಾಯದಿಂದ ತಮ್ಮ ಕೆಲಸಗಳನ್ನು ನಿರ್ವಹಿಸಿಕೊಳ್ಳುತ್ತಾರೆ. ವಿರಾಮದ ಸಮಯವನ್ನು ಪುಸ್ತಕಗಳನ್ನು ಓದುವುದರಲ್ಲಿ ಕಳೆಯುತ್ತಾ, ತಮ್ಮ ಶಿಕ್ಷಕರನ್ನೆ ಆದರ್ಶವಾಗಿಟ್ಟುಕೊಂಡು ತಾವು ಇಂಗ್ಲೀಷ್ ಉಪನ್ಯಾಸಕರಾಗಬೇಕೆಂಬ ಮಹಾತ್ವಾಕಾಂಕ್ಷೆ ಹೊತ್ತಿದ್ದಾರೆ. ಒಳ್ಳೆಯ ವಾತಾವರಣ ಮತ್ತು ಉತ್ತಮವಾದ ಪ್ರೋತ್ಸಾಹಗಳಿಂದ ವ್ಯಕ್ತಿ ಸರ್ವತೋಮುಖ ಬೆಳವಣಿಗೆಯಾಗುತ್ತದೆ ಎಂಬುದು ಇವರ ವಿಷಯದಿಂದ ತಿಳಿಯಬಹುದಾಗಿದೆ.

ಸ್ನೇಹಿತರ ಮನೋಭಾವ, ಸ್ವಚ್ಚತೆ ಮೊದಲಾದ ವಿಷಯಗಳಲ್ಲಿ ಇವರಿಗೆ ಅಸಮಾದಾನವಿದೆ ನಾನು ಒಬ್ಬಂಟಿ ಎಂದು ಭಾವಿಸುವ ಕಾಂಚನಾ ತನ್ನ ಮನೆಯವರೇ ತನ್ನನ್ನು ತಿರಸ್ಕರಿಸುವುದನ್ನು ನೆನೆದು ಮರುಗುತ್ತಾರೆ. ಪೋಷಿಸಿ, ಪಾಲಿಸಿ, ಪ್ರೋತ್ಸಾಹ ನೀಡಬೇಕಾದ ಕುಟುಂಬವೇ ತಿರಸ್ಕಾರದಿಂದ ನೋಡುವುದನ್ನು ಕಾಣಬಹುದಾಗಿದೆ. ದೃಷ್ಟಿ ಸವಾಲುಳ್ಳವರನ್ನು ಸಮಾಜವು ಕೂಡ ನಿರ್ಲಕ್ಷಿಸುತ್ತದೆ ಎಂಬುದು ತಿಳಿದು ಬರುತ್ತದೆ. ರಂಗರಾವ್‌ನಂತಹ ಹೆಚ್ಚು ಹೆಚ್ಚು ಸಂಸ್ಥೆಗಳು ಪ್ರಾರಂಭವಾದರೆ ಕಾಂಚನಾ ಅವರಂತಹ ಎಷ್ಟೋ ಹೆಣ್ಣು ಮಕ್ಕಳಿಗೆ ದಾರಿದೀಪವಾಗಿ ಅವರ ಭವಿಷ್ಯ ಬೆಳಗಲು ಸಹಾಕಾರಿಯಾಗುತ್ತದೆ. ತಾನು ಇಂಗ್ಲೀಷ್ ಉಪನ್ಯಾಸಕಿ ಆಗಲೇಬೇಕು ಎಂಬುದು ಇವರ ಮಹತ್ವಾಕಾಂಕ್ಷೆ. ಸರ್ಕಾರಿ ಸೌಲಭ್ಯಗಳ ಸಹಾಯದಿಂದ ಇವರ ಸಬಲೀಕರಣ ಸಾಧ್ಯವಾಗುತ್ತಿದೆ ಎಂಬುದು ಈ ಪ್ರಕರಣದಿಂದ ತಿಳಿದು ಬರುತ್ತದೆ.

**ಪ್ರಕರಣ –5**

17 ವರ್ಷ ವಯಸ್ಸಿನ ಗಂಗಾ ಗುರಪ್ಪ ಹುಂಡಿ (ಮೂಲ ಹೆಸರು ಬದಲಾಯಿಸಲಾಗಿದೆ) ಅವರು ರಂಗರಾವ್ ಸ್ಮಾರಕ ವಿಕಲಚೇತನರ ಶಾಲೆ, ಮೆಟಗಳ್ಳಿ, ಮೈಸೂರು ಇಲ್ಲಿ 10ನೇ ತರಗತಿಯಲ್ಲಿ ವಾಸಂಗ ಮಾಡುತ್ತಿದ್ದಾರೆ. ಕುರುಬ ಜಾತಿಗೆ ಸೇರಿದ ಇವರು ನಗರ ಪ್ರದೇಶದವರಾಗಿದ್ದಾರೆ. ಈಗ ರಂಗರಾವ್ ಹಾಸ್ಟೆಲ್‌ನಲ್ಲಿ ಇದ್ದಾರೆ. ಇವರಿಗೆ ಹುಟ್ಟಿನಿಂದಲೇ ದೃಷ್ಟಿದೋಷದ ಸಮಸ್ಯೆಯಿದ್ದು ಆಸ್ಪತ್ರೆಗೆ ತೋರಿಸಿದ್ದರು. ಆಗ ವೈದ್ಯರು ನರ ದೌರ್ಬಲ್ಯದಿಂದಾಗಿ ಕಣ್ಣಿನ ಸಮಸ್ಯೆ ಬಂದಿರುವುದು, ಶಸ್ತ್ರಚಿಕಿತ್ಸೆ ಮಾಡಿಸಿದರೂ ಕೂಡ ಕಣ್ಣು ಬರುವುದಿಲ್ಲ ಎಂದರು. ಅದಕ್ಕೆ ಶಸ್ತ್ರ ಚಿಕಿತ್ಸೆ ಮಾಡಿಸಲಿಲ್ಲ. ಇವರ ಅಜ್ಜಿಗೆ ಮತ್ತು ಇವರ ಕುಟುಂಬದ ಇಬ್ಬರೂ ಚಿಕ್ಕ ಮಕ್ಕಳಿಗೆ ದೃಷ್ಟಿದೋಷದ ಸಮಸ್ಯೆಯಿದೆ. ಜೊತೆಗೆ ತಂದೆ, ತಾಯಿ ಕೂಡ ಹತ್ತಿರದ ಸಂಬಂಧದಲ್ಲಿಯೇ ವಿವಾಹವಾಗಿದ್ದಾರೆ. ಈ ಕಾರಣಗಳಿಂದಾಗಿ ಇವರಿಗೆ ದೃಷ್ಟಿದೋಷವು ಅನುವಂಶೀಯವಾಗಿ ಬಂದಿರುವ ಸಾಧ್ಯತೆಗಳಿವೆ. ಅಂಗವಿಕಲ ಕಲ್ಯಾಣ ಇಲಾಖೆಯಿಂದ ಇವರು ವಿಕಲತೆ ಪ್ರಮಾಣ ಪತ್ರವನ್ನು ಪಡೆದಿಲ್ಲ, ಈಗ ಅರ್ಜಿ ಸಲ್ಲಿಸಿದ್ದಾರೆ. ತಂದೆ ಸರ್ಕಾರಿ ಉದ್ಯೋಗದಲ್ಲಿದ್ದಾರೆ. ಮನೆಯಲ್ಲಿ ಎಲ್ಲಾ ಚೆನ್ನಾಗಿ ನೋಡಿಕೊಳ್ಳುತ್ತಾರೆ. ಆದರೆ ಅಮ್ಮ ಬೈತಾರೆ. ಅದು ಬೇಸರವಾಗುತ್ತೆ ಎನ್ನುತ್ತಾರೆ

ಗಂಗಾ. ಗಂಗಾ ಅವರು 8ನೇ ತರಗತಿವರೆಗೆ ಸೈಟೆಡ್ ಶಾಲೆಯಲ್ಲಿಯೇ ಓದುತ್ತಿದ್ದರು. ಆ ಶಾಲೆಯಲ್ಲಿ ಇಬ್ಬರು ಪುರುಷ ಶಿಕ್ಷಕರು ಗಂಗಾ ಅವರನ್ನು ಕೆಟ್ಟ ದೃಷ್ಟಿಯಲ್ಲಿ ನೋಡುವುದು, ಕ್ಲಾಸ್ ರೂಮ್‌ನಲ್ಲಿ ಗಂಗಾ ಅವರ ಹಿಂದೆ ಬಂದು ನಿಂತು ಮುಟ್ಟಿ ಮಾತನಾಡಿಸೋದು, ವಿಚಿತ್ರವಾಗಿ ನೋಡೋದು ಮಾಡುತ್ತಿದ್ದರು. ಗಂಗಾ ಶಾಲೆಯ ಮುಖ್ಯಶಿಕ್ಷಕರಿಗೆ ದೂರು ನೀಡಿದರು. ಆಗ ಇಬ್ಬರು ಶಿಕ್ಷಕರನ್ನು ಶಾಲೆಯಿಂದ ಅಮಾನತ್ತುಗೊಳಿಸಲಾಯಿತು. ನಂತರ ಶಾಲೆಯ ಹೊರಗೂ ತೊಂದರೆ ಕೊಡಲು ಪ್ರಾರಂಭಿಸಿದರು, ಅದಕ್ಕೆ ಆ ಶಾಲೆ ಬಿಟ್ಟು ಇಲ್ಲಿಗೆ ಬಂದು ರಂಗರಾವ್ ಶಾಲೆಗೆ 9ನೇ ತರಗತಿಗೆ ಸೇರಿಕೊಂಡರು. ಹಾಗಾಗಿ ಇವರು ಬ್ರೈಲ್ ಲಿಪಿಯನ್ನು ಪೂರ್ತಿಯಾಗಿ ಕಲಿತ್ತಿಲ್ಲ. ಈಗ ಕಲಿಯುತ್ತಿದ್ದಾರೆ. ಶಾಲೆಯಲ್ಲಿ ಶಿಕ್ಷಕರು ತಾರತಮ್ಯ ಮಾಡವುದರಿಂದ ಶಿಕ್ಷಕರು ಆಯ್ಕೆ ಮಾಡಿದ ವಿದ್ಯಾಥಿಗಳು ಮಾತ್ರ ಎಲ್ಲಾ ಶಾಲಾ ಚಟುವಟಿಕೆಗಳಲ್ಲು ಸ್ಫರ್ದಿಸಲು ಸಾಧ್ಯ. ಆದ್ದರಿಂದ ಶಾಲೆಯ ಎಲ್ಲಾ ಕಾರ್ಯಕ್ರಮಗಳಲ್ಲು ಭಾಗವಹಿಸಲು ನನಗೆ ಸಾಧ್ಯವಾಗುತ್ತಿಲ್ಲ ಎನ್ನುತ್ತಾರೆ.ಕೆಲವು ಕ್ರೀಡೆಗಳಲ್ಲಿ ಶಾಲಾ ಹಂತದ ಪ್ರಶಸ್ತಿಗಳನ್ನು ಪಡೆದುಕೊಂಡಿದ್ದಾರೆ. ವಿಕಲತೆಯ ಪ್ರಮಾಣ ಪತ್ರಕ್ಕೆ ಈಗ ಅರ್ಜಿ ಸಲ್ಲಿಸಿದ್ದಾರೆ. ಸರ್ಕಾರದ ಸೌಲಭ್ಯಗಳ ಬಗ್ಗೆ ಇವರಿಗೆ ಪೂರ್ಣ ಮಾಹಿತಿ ಗೊತ್ತಿಲ್ಲ.

ಶಾಲೆಯಲ್ಲಿ ಎಲ್ಲ ಸೌಲಭ್ಯಗಳನ್ನು ಒದಗಿಸಲಾಗುತ್ತದೆ. ಹಾಸ್ಟೆಲ್‌ನಲ್ಲಿ ಮೂಲಭೂತ ಅಗತ್ಯ ಸೌಕರ್ಯಗಳನ್ನು ಒದಗಿಸಿಕೊಡಲಾಗುತ್ತದೆ. ಹಾಸ್ಟೆಲ್‌ನಲ್ಲಿ ಊಟ ಚೆನ್ನಾಗಿರುವುದಿಲ್ಲ. ಹಾಸ್ಟೆಲ್‌ನಲ್ಲಿ ಆಂಟಿಯರು ಬೈಯೋದು, ಮನೆಯಿಂದ ಫೋನ್ ಬಂದಾಗ ನಮ್ಮಗೆ ಮಾತನಾಡಲು ಕೊಡದಿರುವುದು, ಹುಷಾರಿಲ್ಲದಿದ್ದಾಗ ಸರಿಯಾಗಿ ನೋಡಿಕೊಳ್ಳದೆ ಬೈಯೋದು, ಇವೆಲ್ಲಾ ತುಂಬಾ ಬೇಸರವಾಗುತ್ತೆ. ಮನೆಯಲ್ಲಿಯೇ ಇರಬೇಕಿತ್ತು ಅನ್ನಿಸುತ್ತೆ ಎನ್ನುತ್ತಾರೆ ಗಂಗಾ. ವಿರಾಮದ ಸಮಯದಲ್ಲಿ ಪುಸ್ತಕಗಳನ್ನು ಓದುತ್ತಾ, ಸ್ನೇಹಿತರ ಜೊತೆ ಸಮಯ ಕಳೆಯುತ್ತಾರೆ. ತಮ್ಮ ಪೋಷಕರನ್ನೆ ತಮ್ಮ ಜೀವನದ ಆದರ್ಶ ಮಾದರಿಗಳನ್ನಾಗಿಟ್ಟುಕೊಂಡು ತಾವು ಪೋಲಿಸ್ ಆಫೀಸರ್ ಆಗಬೇಕೆಂಬ ಮಹಾತ್ವಾಕಾಂಕ್ಷೆಯನ್ನು ಹೊಂದಿದ್ದಾರೆ.

ತಾಯಿಗೆ ಗಂಡು ಮಕ್ಕಳ ಮೇಲೆ ವ್ಯಾಮೋಹ ಹೆಚ್ಚು ಇರುವುದರಿಂದ ಗಂಗಾ ಅವರ ಮೇಲೆ ಸ್ವಲ್ಪ ತಿರಸ್ಕಾರವಿದೆ ಹಾಗೂ ಇವರಿಗೆ ತಾರತಮ್ಯ ಮಾಡಲಾಗುತ್ತದೆ. ತನಗೆ ಶಿಕ್ಷಣ ನೀಡುವ ಶಿಕ್ಷಕರಿಂದಲೇ ಲೈಂಗಿಕ ದೌರ್ಜನ್ಯಕ್ಕೆ ಒಳಗಾಗಬೇಕಾದ ದುಸ್ಥಿತಿ ಇವರಿಗೆ ಬಂದಿದ್ದರಿಂದ ತಮ್ಮ ಊರು, ತಮ್ಮವರು ಮತ್ತು ತಮ್ಮ ಶಾಲೆ ಎಲ್ಲವನ್ನು ಬಿಟ್ಟು ರಂಗರಾವ್ ಶಾಲೆಗೆ ಬಂದು ಸೇರಿದ್ದಾರೆ. 'ಬೆಲಿಯೇ ಎದ್ದು ಹೊಲ ಮೇಯಿತು' ಎಂಬ ಗಾದೆ ಮಾತಿನಂತೆ ಪೂಜ್ಯ ಸ್ಥಾನದಲ್ಲಿ ಇದ್ದು, ತಪ್ಪು, ಸರಿಗಳನ್ನು ತಿಳಿಸುತ್ತಾ, ಸರಿಯಾದ ಮಾರ್ಗದಲ್ಲಿ ನಡೆಯಲು ಮಾರ್ಗದರ್ಶನ ಮಾಡಬೇಕಾದ ಶಿಕ್ಷಕರೆ ಹೀಗೆ ವಿದ್ಯಾರ್ಥಿಗಳನ್ನು ಕೆಟ್ಟ ದೃಷ್ಟಿಯಿಂದ ನೋಡುವಂತಾದರೆ ಅವರು ಉತ್ತಮ ಶಿಕ್ಷಕರು ಹೇಗೆ ಆಗಬಲ್ಲರು, ಮಕ್ಕಳ ಭವಿಷ್ಯವನ್ನು ಹೇಗೆ ನಿರ್ಮಿಸಬಲ್ಲರು.ಶಾಲೆಯಲ್ಲಿ ನಡೆಯುವ ಈ ರೀತಿಯ ಘಟನೆಗಳಿಂದಾಗಿ ಹೆಣ್ಣು ಮಕ್ಕಳನ್ನು ಶಾಲೆಗೆ ಕಳುಹಿಸಲು ಹಿಂಜರಿಯುವಂತಹ ವಾತಾವರಣ ಸೃಷ್ಟಿಯಾಗುತ್ತದೆ. ದೃಷ್ಟಿ ಸವಾಲುಳ್ಳ ವಿದ್ಯಾರ್ಥಿನಿಯರನ್ನು ಶಾಲೆಗೆ ಕಳುಹಿಸುವುದೇ ಕಷ್ಟ. ಹಾಗಿರುವಾಗ ಶಿಕ್ಷಕರಿಂದಲೇ ಈ ರೀತಿಯ ದೌರ್ಜನ್ಯಗಳು ಆಗುತ್ತಿವೆ ಎಂದಾಗ ಇಂತಹ ಮಕ್ಕಳನ್ನು ಶಾಲೆ ಬಿಡಿಸುವ ಸಾಧ್ಯತೆಗಳು ಹೆಚ್ಚಿರುತ್ತವೆ. ಗಂಗಾರ ಪೋಷಕರಿಗೆ ವಿಶೇಷ

ಶಾಲೆಯ ಬಗ್ಗೆ ಮಾಹಿತಿ ತಿಳಿದಿದ್ದರಿಂದ ಅವರನ್ನು ಇಲ್ಲಿಗೆ ಕರೆತಂದು ರಂಗರಾವ್ ಶಾಲೆಗೆ ಸೇರಿಸಲಾಯಿತು. ಇಲ್ಲವಾದರೆ ಅವರು ಸಹ ಶಿಕ್ಷಣದಿಂದ ವಂಚಿತರಾಗಬೇಕಾಗಿತ್ತು. ಹಾಗಾಗಿ ಈ ತರಹದ ಕೆಟ್ಟ ಮನೋಭಾವದ ಶಿಕ್ಷಕರಿಗೆಲ್ಲಾ ತಕ್ಕ ಶಾಸ್ತಿ ಮಾಡಬೇಕು, ಕಠಿಣವಾದ ಶಿಕ್ಷೆಗಳನ್ನು ಕೊಡಬೇಕು. ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಇಬ್ಬರಿಗೂ ಕೂಡ ಹೆಚ್ಚು, ಹೆಚ್ಚು ಲಿಂಗಸೂಕ್ಷ್ಮತಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಲಿಂಗಸೂಕ್ಷ್ಮತೆಯ ಬಗ್ಗೆ ಅರಿವು ಮೂಡಿಸುವಂತಾಗಬೇಕು. ಎಲ್ಲರಿಗೂ ವಿಶೇಷ ಶಾಲೆ ಮತ್ತು ದೃಷ್ಟಿಸವಾಲುಳ್ಳವರಿಗಾಗಿಯೇ ಇರುವ ಸೌಲಭ್ಯಗಳ ಬಗ್ಗೆ ಮಾಹಿತಿ ತಿಳಿಯುವಂತೆ ಮಾಡಬೇಕು. ಮಕ್ಕಳಿಗೆ ಲೈಂಗಿಕ ಶಿಕ್ಷಣವನ್ನು ನೀಡಬೇಕು. ತಮಗಾಗುವ ಕೆಟ್ಟ ಅನುಭಗಳನ್ನು ಮುಕ್ತವಾಗಿ ಹೇಳಿಕೊಳ್ಳಲು ಅವಕಾಶ ಮಾಡಿಕೊಡಬೇಕು. ಸೂಕ್ತವಾದ ಪ್ರೋತ್ಸಾಹ ಮತ್ತು ಬೆಂಬಲ ನೀಡಬೇಕು.

**ಉಪಸಂಹಾರ**

ಮೇಲಿನ ಪ್ರಕರಣಗಳನ್ನು ನೋಡಿದಾಗ ದೃಷ್ಟಿ ಸವಾಲುಳ್ಳ ವಿದ್ಯಾರ್ಥಿಗಳು ಹಲವು ಸಮಸ್ಯೆ–ಸವಾಲುಗಳನ್ನು ಎದುರಿಸುತ್ತಿದ್ದಾರೆ. ಸಮಾಜದಲ್ಲಿ ಸಾಮಾನ್ಯ ಹೆಣ್ಣುಮಕ್ಕಳು ಅನುಭವಿಸುವ ಶೋಷಣೆ, ನೋವುಗಳಿಗಿಂತ ದೃಷ್ಟಿ ಸವಾಲುಳ್ಳ ಹೆಣ್ಣು ಮಕ್ಕಳು ಅನುಭವಿಸುವ ಶೋಷಣೆಗಳು ವಿಭಿನ್ನ ಹಾಗೂ ತೀವ್ರತರದ್ದಾಗಿರುತ್ತದೆ. ತಮಗೆ ಶೋಷಣೆ ಮಾಡುತ್ತಿರುವವರು ಯಾರು, ಎಲ್ಲಿಂದ ಹಾಗೂ ಯಾರಿಂದ ಅಪಾಯವಿದೆ ಎಂದು ಕೂಡ ತಿಳಿಯುವುದಿಲ್ಲ. ತಮಗಾಗುವ ಶೋಷಣೆಗಳನ್ನು ಹೇಳಿಕೊಳ್ಳಲು ಕೂಡ ಧ್ವನಿ ಇರುವುದಿಲ್ಲ. ಕುಟುಂಬದಲ್ಲಿಯೂ ಕೂಡ ದೃಷ್ಟಿಸವಾಲುಳ್ಳ ಹೆಣ್ಣು ಮಕ್ಕಳಿಗೆ ಸಮಾನ ಪ್ರೀತಿ, ವಾತ್ಸಲ್ಯಗಳು ದೊರೆಯುವುದಿಲ್ಲ. ಕೆಲವೊಮ್ಮೆ ಕುಟುಂಬದವರೆ ದೃಷ್ಟಿ ಸವಾಲುಳ್ಳ ಹೆಣ್ಣು ಮಕ್ಕಳನ್ನು ಶಾಪವೆಂಬತೆ ಭಾವಿಸುವುದು, ಕೀಳಾಗಿ ನೋಡುವುದನ್ನು, ಪೋಷಕರೆ ತಮ್ಮ ದೃಷ್ಟಿಸವಾಲುಳ್ಳ ಮಕ್ಕಳನ್ನು ತೊರೆಯುವುದನ್ನು ಕಾಣಬಹುದಾಗಿದೆ.

ಕುಟುಂಬದವರೆ ಪ್ರೋತ್ಸಾಹ ನೀಡದೆ, ಶಿಕ್ಷಣ ಕೊಡಿಸದೆ ಮೂಲೆಗುಂಪಾಗಿಸುವುದನ್ನು ಕಾಣಬಹುದು. ಪೋಷಕರಲ್ಲಿ ಅರಿವು ಮೂಡಿಸುವ ಮೂಲಕ ಪೋಷಕರು ತಮ್ಮ ಎಲ್ಲಾ ಮಕ್ಕಳನ್ನು ಸಮಾನವಾಗಿ ನೋಡುವಂತೆ ಮಾಡಬೇಕು. ತಮ್ಮ ದೃಷ್ಟಿ ಸವಾಲುಳ್ಳ ಮಕ್ಕಳಿಗೆ ವಿಶೇಷ ಕಾಳಜಿ ಮತ್ತು ಶಿಕ್ಷಣ ನೀಡುವುದು, ಅವರು ಸಮಾಜದಲ್ಲಿ ಸ್ವಾವಲಂಭಿಯಾಗಿ ಬದುಕಲು ಬೇಕಾದ ಪ್ರೋತ್ಸಾಹ ಹಾಗೂ ಬೆಂಬಲವನ್ನು ನೀಡುವ ಮೂಲಕ ಅವರು ಸಹ ಸಮಾಜದಲ್ಲಿ ಸಮಾನವಾಗಿ ಬದುಕಲು ಸಾಧ್ಯವಾಗುವಂತೆ ಮಾಡಬೇಕು. ಸರ್ಕಾರದ ಸೌಲಭ್ಯಗಳ ಬಗ್ಗೆ ಪೋಷಕರು ಮತ್ತು ಮಕ್ಕಳಿಗೆ ತಿಳಿಸುವ ಕಾರ್ಯಗಳನ್ನು ಮಾಡಬೇಕು. ದೃಷ್ಟಿಸವಾಲುಳ್ಳ ಹೆಣ್ಣು ಮಕ್ಕಳಿಗೆ ಆತ್ಮ ರಕ್ಷಣೆಯ ವಿಧಗಳನ್ನು ಹೇಳಿಕೊಡುವ ಮೂಲಕ ಹಾಗೂ ತಮಗಾದ ದೌರ್ಜನ್ಯ ಮತ್ತು ಶೋಷಣೆಗಳನ್ನು ಹೆದರದೆ ಧೈರ್ಯವಾಗಿ ಹೇಳಿಕೊಳ್ಳುವ ಮೂಲಕ ಅವರ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವ ಪ್ರಯತ್ನ ಮಾಡಲು ಮುಂದಾಗುವಂತೆ ಅವರಿಗೆ ಅರಿವು ಮತ್ತು ಬೆಂಬಲವನ್ನು ನೀಡಬೇಕು, ಜೊತೆಗೆ ಸಮಾಜದಲ್ಲಿ ಎಲ್ಲರೂ ದೃಷ್ಟಿ ಸವಾಲುಳ್ಳವರನ್ನು ಸಮಾನವಾಗಿ ನೋಡುವಂತೆ ಮತ್ತು ಸಮಾನವಾಗಿ ಗೌರವಿಸುವಂತಾದಾಗ ದೃಷಿ ಸವಾಲುಳ್ಳ ಹೆಣ್ಣು ಮಕ್ಕಳ ಸಮಸ್ಯೆಗಳ ಪರಿಹಾರ ಸಾಧ್ಯವಾಗುತ್ತದೆ.

**ಪರಾಮರ್ಶನ ಗ್ರಂಥಗಳು**


- ಮೋಹನ್ ಎಸ್.ಎಸ್. (2015). ಕಣ್ಣು, 106 ಪ್ರಶ್ನೆಗಳು. ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೆಟ್ ಲಿಮಿಟೆಡ್, ಬೆಂಗಳೂರು.
- ವಿನೋದ ಛೆಬ್ಬಿ. (2012). ಲೈಂಗಿಕ ಆರೋಗ್ಯ ಮತ್ತು ವ್ಯಕ್ತಿತ್ವ ವಿಕಾಶ. ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೆಟ್ ಲಿಮಿಟೆಡ್, ಬೆಂಗಳೂರು.
- ಚಂದ್ರಶೇಖರ್ ಸಿ.ಆರ್. (2019). ನಿಮ್ಮ ಮಗುವಿನ ಮನಸ್ಸು. ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೆಟ್ ಲಿಮಿಟೆಡ್, ಬೆಂಗಳೂರು.